ಸಂಪುಟ 01 | ಸಂಚಿಕೆ 164 | ಶುಕ್ರವಾರ 08 ಮೇ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

REGIONAL KANNADA DAILY MORNING

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ವಿಶ್ವ ರೆಡ್ ಕ್ರಾಸ್ ದಿನ**

ರೆಡ್ ಕ್ರಾಸ್ ಸಂಸ್ಥಾಪಕರ ಜನ್ಮ ವಾರ್ಷಿಕೋತ್ಸವದ ಸ್ಮರಣಾರ್ಥ ಪ್ರತಿ ವರ್ಷ ಮೇ 8 ರಂದು ವಿಶ್ವ ರೆಡ್ ಕ್ರಾಸ್ ದಿನವನ್ನು ಆಚರಿಸಲಾಗುತ್ತದೆ. ರೆಡ್ ಕ್ರಾಸ್ ಸಂಸ್ಥಾಪಕರು ಹೆನ್ರಿ ಡ್ಯೂನಾಂಟ್ ಮತ್ತು ಅಂತರರಾಷ್ಟ್ರೀಯ ರೆಡ್ ಕ್ರಾಸ್ ಸಮಿತಿಯ (ಐಸಿಆರ್‌ಸಿ) ಸ್ಥಾಪಕರು ಎಂದು ನಾವು ನಿಮಗೆ ಹೇಳೋಣ. ಅವರು 1828 ರಲ್ಲಿ ಜಿನೀವಾದಲ್ಲಿ ಜನಿಸಿದರು. ಅವರು ಮೊದಲ ನೊಬೆಲ್ ಶಾಂತಿ ಪ್ರಶಸ್ತಿಯನ್ನು ಪಡೆದ ಮೊದಲ ವ್ಯಕ್ತಿಯಾದರು.

**2) ವಿಶ್ವ ಥಲಸ್ಸೇಮಿಯಾ ದಿನ**

ತಲಸ್ಸೇಮಿಯಾದಿಂದ ಬಳಲುತ್ತಿರುವ ಎಲ್ಲಾ ರೋಗಿಗಳು ಮತ್ತು ತಮ್ಮ ರೋಗದ ಹೊರೆಯ ಹೊರತಾಗಿಯೂ ಜೀವನದ ಬಗ್ಗೆ ಎಂದಿಗೂ ಭರವಸೆ ಕಳೆದುಕೊಳ್ಳದ ಅವರ ಪೋಷಕರ ಗೌರವಾರ್ಥವಾಗಿ ಪ್ರತಿ ವರ್ಷ ಮೇ 8 ರಂದು ವಿಶ್ವ ಥಲಸ್ಸೇಮಿಯಾ ದಿನ ಅಥವಾ ಅಂತರರಾಷ್ಟ್ರೀಯ ಥಲಸ್ಸೇಮಿಯಾ ದಿನವನ್ನು ಆಚರಿಸಲಾಗುತ್ತದೆ. ಈ ದಿನವು ರೋಗದೊಂದಿಗೆ ಬದುಕಲು ಹೆಣಗಾಡುವವರನ್ನು ಪ್ರೋತ್ಸಾಹಿಸುತ್ತದೆ

## ಸುಭಾಷಿತ

ಹರನಿಚ್ಚೆಯಿಲ್ಲದಲೆ ಹರಿದು ಹೋಗದು ಪಾಪ
ಹರಭಕ್ತಿಯುಳ್ಳ ಗುರುವರನು ಓರ್ವನೇ ನರ
ದೈವವೆಂಬೆ ಸರ್ವಜ್ಞ..!
ಸರ್ವಜ್ಞ

–ಬಸವಣ್ಣ

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# ಅಂಚೆ ಮತ ಮರು ಎಣಿಕೆ : ತನಿಖೆಗೆ ಮಾಜಿ ಶಾಸಕ ಟಿ.ಡಿ.ರಾಜೇಗೌಡ ಆಗ್ರಹ

ಬೆಂಗಳೂರು: ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಪತ್ರಗಳನ್ನು ತಿದ್ದಿರುವ ಅನುಮಾನವಿದ್ದು, ಈ ಬಗ್ಗೆ ನ್ಯಾಯಯುತ ತನಿಖೆಯಾಗಬೇಕು ಎಂದು ಮಾಜಿ ಶಾಸಕ ಟಿ.ಡಿ.ರಾಜೇಗೌಡ ಕೇಂದ್ರ ಚುನಾವಣಾ ಆಯೋಗವನ್ನು ಆಗ್ರಹಿಸಿದರು. ರಾಜ್ಯ ಮುಖ್ಯ ಚುನಾವಣಾಧಿಕಾರಿ ವಿ.ಅನ್ಬುಕುಮಾರ್‌ರವ–ರಿಗೆ ಈ ಸಂಬಂಧ ಇಂದು ಮನವಿ ಪತ್ರ ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2023 ರ ಮೇ 13 ರಂದು ನಡೆದ ಮತ ಎಣಿಕೆ ಸಂದರ್ಭದಲ್ಲಿ ಮಾನ್ಯವಾಗಿದ್ದ ಅಂಚೆ ಮತಪತ್ರಗಳು, ಮರು ಎಣಿಕೆ ಸಂದರ್ಭದಲ್ಲಿ ಅಮಾನ್ಯವಾಗಿರುವುದು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ. ಈ ವಿಚಾರದಲ್ಲಿ ಸತ್ಯಾಂಶ ಹೊರಬರಲು ನ್ಯಾಯಯುತ ತನಿಖೆಯಾಗಬೇಕು ಎಂದು ಅವರು ಒತ್ತಾಯಿಸಿದರು.

2023ರ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಸೇರಿದಂತೆ ಎಲ್ಲಾ ಅಭ್ಯರ್ಥಿಗಳು ಮತ ಎಣಿಕೆ ಸಂದರ್ಭದಲ್ಲಿ ಹಾಜರಿದ್ದರು. ಆಗ ಯಾವುದೇ ಆಕ್ಷೇಪ ವ್ಯಕ್ತಪಡಿಸದೆ ಎಲ್ಲಾ ಏಜೆಂಟ–ರು ಸಹಿ ಮಾಡಿದ್ದಾರೆ. ಆ ಸಂದರ್ಭದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ನನ್ನನ್ನು ಚುನಾಯಿತರಾಗಿದ್ದಾರೆ ಎಂದು ಚುನಾವಣಾಧಿಕಾರಿ ಘೋಷಿಸಿದ್ದರು. ಆ ನಂತರ ಬಿಜೆಪಿ ಅಭ್ಯರ್ಥಿಯಾಗಿದ್ದ ಶಾಸಕ ಡಿ.ಎನ್.ಜೀವರಾಜ್ ಅವರು ನನ್ನ ವಿರುದ್ಧ ಆರೋಪಗಳನ್ನು ಮಾಡಿದ್ದರು. ಆ ಆರೋಪಗಳು



ನ್ಯಾಯಾಲಯದಲ್ಲಿ ತಿರಸ್ಕೃತವಾಗಿವೆ. ರಾಜ್ಯ ಹೈಕೋರ್ಟ್ ಅಮಾನ್ಯವಾಗಿದ್ದ 279 ಅಂಚೆ ಮತಗಳು ಸೇ–ರಿದಂತೆ ಅಂಚೆ ಮತಗಳ ಮರು ಎಣಿಕೆಗೆ ಸೂಚಿಸಿತ್ತು.

ಮರು ಎಣಿಕೆ ಸಂದರ್ಭದಲ್ಲಿ ಅಂಚೆ ಮತಪತ್ರಗಳಿದ್ದ ಟ್ರಂಕ್ ತೆರೆದಿತ್ತು. ಸೀಲ್ ಕೂಡಾ ತೆರೆದಿತ್ತು ಎಂದು ಅವರು ಆರೋಪಿಸಿದರು.ಈ ರೀತಿ ಅನ್ಯಾಯ ಜಗತ್ತಿನಲ್ಲಿ ಎಲ್ಲಿಯೂ ಆಗಬಾರದು, ಯಾ–ರಿಗೂ ಆಗಬಾರದು. ನನಗೆ ಆಯೋಗದ ಮೇಲೆ ನಂಬಿಕೆಯಿದೆ. ಈ ವಿಚಾರದಲ್ಲಿ ಸರಿಯಾದ ತನಿಖೆಯಾಗಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಆಗಬೇಕು. ತಿದ್ದಿರುವ ಅನುಮಾನ ಇರುವ ಮತಪತ್ರಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯದಲ್ಲಿ ಪರೀಕ್ಷೆಗೊಳಪಡಿಸಬೇಕು. ಚುನಾವಣಾ ಆಯೋಗವನ್ನು ಬಳಸಿಕೊಂಡಿರುವ ಅನುಮಾನವೂ ಇದೆ. ತನಿಖೆಯಾದರೆ ಸತ್ಯಾಂಶ ಹೊರಬರಲಿದೆ ಎಂದು ಹೇಳಿದ ಅವರು, ರಾಜ್ಯ ಮುಖ್ಯ ಚುನಾವಣಾಧಿಕಾರಿಗಳು ನನ್ನ ಮನವಿಯನ್ನು ಕೇಂದ್ರ ಚುನಾವಣಾ ಆಯೋಗಕ್ಕೆ ಕಳುಹಿಸುವುದಾಗಿ ಹೇಳಿದ್ದಾರೆ ಎಂದರು.

ರಾಜೇಗೌಡ ಅವರ ಏಜೆಂಟ್ ಆಗಿದ್ದ ರಾಜ್ಯ ಕಾಂಗ್ರೆಸ್ ವಕ್ತಾರ ಸುಧೀರ್ ಕುಮಾರ್ ಮುರೊಳ್ಳಿ ಮಾತನಾಡಿ, 2023 ರ ಮೇ 13 ರಂದು ನಡೆದ ಮತ ಎಣಿಕೆ ಸಂದರ್ಭದಲ್ಲೂ ನಾನು ರಾಜೇಗೌಡರ ಚುನಾವಣಾ ಏಜೆಂಟ್ ಆಗಿದ್ದೆ. ಆಗ 201 ಮತಗಳ ಅಂತರದಿಂದ ರಾಜೇಗೌಡರು ಜಯ ಗಳಿಸಿದ್ದರು. ನ್ಯಾಯಾಲಯದ ಆದೇಶದಂತೆ ಅಂಚೆ ಮತಗಳ ಮರು ಎಣಿಕೆ ಮಾಡಿದ ಸಂದರ್ಭದಲ್ಲಿ ತಿದ್ದಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಇಂಕ್ ವ್ಯತ್ಯಾಸವಿದೆ. ಹೆಬ್ಬೆಟ್ಟು ಹಾಕಿರುವುದು, ಟಿಕ್ ಮಾಡಿರುವುದು ಕಂಡುಬಂದಿದೆ. ಇದರಿಂದ ಮತ ಡಕಾಯಿತಿ ಆಗಿದೆ ಎಂದು ಆರೋಪಿಸಿದರು.

2023 ರಲ್ಲಿ ಮತ ಎಣಿಕೆ ನಡೆದಾಗ ಅಭ್ಯರ್ಥಿಗಳ ಚುನಾವಣಾ ಏಜೆಂಟರುಗಳು ಆಕ್ಷೇಪವೆತ್ತಿರಲಿಲ್ಲ. ಆನಂತರ ಆರೋಪ ಮಾಡಲಾಗಿದೆ. ಅಂಚೆ ಮತಪತ್ರ ತಿದ್ದಿರುವ ಬಗ್ಗೆ ತನಿಖೆಯಾಗಬೇಕು. ಆದರೆ ತನಿಖೆಯನ್ನು ತಡೆಹಿಡಿಯುವ ಪ್ರಯತ್ನ ಮಾಡಲಾಗುತ್ತಿದೆ ಎಂದು ದೂರಿದರು. ಚುನಾವಣಾ ಆಯೋಗವು ಮತ ಎಣಿಕೆಯನ್ನು ನಿಷ್ಪಕ್ಷಪಾತ ಹಾಗೂ ಪಾರದರ್ಶಕತೆಯಲ್ಲಿ ಮಾಡಬೇಕು. ನಾವು ನ್ಯಾಯ ದೇವತೆ ಎದುರು ಹಾಗೂ ಧರ್ಮಕ್ಷೇತ್ರಗಳಲ್ಲಿ ನ್ಯಾಯ ಕೇಳುತ್ತೇವೆ. ಈ ವಿಚಾರದಲ್ಲಿ ಗಂಭೀರ ಹೋರಾಟ ಮಾಡುತ್ತೇವೆ ಎಂದು ತಿಳಿಸಿದರು.ಈ ಸಂದರ್ಭದಲ್ಲಿ ಮಾಜಿ ಸಚಿವ ಜಯಪ್ರಕಾಶ್ ಹೆಗ್ಡೆ, ವಿಧಾನಪರಿಷತ್ ಸದಸ್ಯೆ ಆರತಿ–ಕೃಷ್ಣ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

# ಬಿಸಿಲಿನ ನಡುವೆ ಕಾರ್ಮಿಕರ ಸುರಕ್ಷತೆಗೆ ಕ್ರಮ :EM ಖಾಲೀದ್ ಅಹಮದ್

**ನೈಜ್ಯ ದೆಸೆ ನ್ಯೂಸ್**

ಮಾನ್ವಿ: ತಾಲೂಕಿನ ನೀರಮಾನವಿ ಹಾಗೂ ಕಪಗಲ್ ಗ್ರಾಮ ಪಂಚಾಯತಿಗಳಲ್ಲಿ ನರೇಗಾ ಯೋಜನೆಯಡಿ ನಡೆಯುತ್ತಿರುವ ಕಾಮಗಾರಿಗಳಿಗೆ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಾದ ಖಾಲೀದ್ ಅಹಮದ್ ಅವರು ಗುರುವಾರ ಭೇಟಿ ನೀಡಿ ಕಾಮಗಾರಿ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಸರ್ಕಾರದ ಆದೇಶದಂತೆ ನರೇಗಾ ಕೂಲಿ ಕಾರ್ಮಿಕರಿಗೆ ಕುಡಿಯುವ ನೀರು, ನೆರಳಿಗಾಗಿ ಟೆಂಟ್ ಹಾಗೂ ಪ್ರಥ–



ಮ ಚಿಕಿತ್ಸೆ ವ್ಯವಸ್ಥೆ ಕಡ್ಡಾಯವಾಗಿ ಕಲ್ಪಿಸಬೇಕೆಂದು ಸೂಚಿಸಿದರು. ಎನ್‌ಎಂ–ಎಂಎಸ್ ತಂತ್ರಾಂಶದಲ್ಲಿ ಕೂಲಿ ಕಾರ್ಮಿಕರ ಮುಖಚಹರೆ ಆಧಾರಿತ ಹಾಜರಾತಿಯನ್ನು ದಿನಕ್ಕೆ ಎರಡು ಬಾರಿ ಕಡ್ಡಾಯವಾಗಿ ದಾಖಲಿಸಬೇಕು ಎಂದು ಮೇಟಿಗಳಿಗೆ ಮಾಹಿತಿ ನೀಡಿದರು. ಅಲ್ಲದೆ, ಎನ್‌ಎಂಎಂಎಸ್ ಹಾಜರಾತಿಯನ್ನು ಖುದ್ದಾಗಿ ಪರಿಶೀಲಿಸಿದರು.

ನರೇಗಾ ಯೋಜನೆಯಡಿ 65 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು, ವಿಶೇಷಚೇತನರು ಹಾಗೂ ಗರ್ಭಿಣಿಯರಿಗೆ ಶೇಕಡಾ 50 ರಷ್ಟು ಕೆಲಸ ಮಾಡಿದರೂ ಪೂರ್ಣ ಪ್ರಮಾಣದ ಕೂಲಿ ನೀಡಲಾಗುತ್ತಿದೆ ಎಂದು ತಿಳಿಸಿದರು. ಬಿಸಿಲಿನ ತಾಪಮಾನ ಹೆಚ್ಚಿರುವ ಹಿನ್ನೆಲೆ ಕೂಲಿ ಕಾರ್ಮಿಕರು ಬೆಳಗ್ಗೆ ಬೇಗ ಕೆಲಸ ಆರಂಭಿಸಿ ಬೇಗ ಮನೆಗೆ ತೆರಳುವಂತೆ ಸಲಹೆ ನೀಡಿದರು. ಜೊತೆಗೆ ಕಾರ್ಮಿಕರಿಗೆ ನಿರಂತರ ಉದ್ಯೋಗ ಒದಗಿಸುವಂತೆ ಪಿಡಿಒಗಳಿಗೆ ಸೂಚಿಸಿದರು. ಕೂಲಿ ಕಾರ್ಮಿಕರು ನಿರ್ವಹಿಸಿರುವ ಕೆಲಸದ ಪ್ರಮಾಣವನ್ನೂ ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಸಹಾಯಕ ನಿರ್ದೇಶಕರಾದ ದೀಪಾ ಅರಳಿಕಟ್ಟಿ, ಕಪಗಲ್ ಗ್ರಾಮ ಪಂಚಾಯತಿ ಆಡಳಿತಾಧಿಕಾರಿ ಉಮಾಕಾಂತ, ಪಂಚಾಯತಿ ಅಭಿವೃದ್ಧಿ ಅಧಿಕಾ–ರಿಗಳಾದ ದೇವಪ್ಪ ಮರಡಿ, ಮಹ್ಮದ್ ಜುಬೇರ್, ಚಿದಾನಂದ ಟಿಸಿ, ಈರೇಶ್ ಟಿಐಇಸಿ, ಟಿಎ ರಂಜಿತ್, ಗ್ರಾಮ ಬಿಎಫ್ಟಿಗಳಾದ ಸಿದ್ದಾರಾಮ, ನಾಗರಾಜ್, ಡಿಇಒಗಳಾದ ನದೀಮ್ ಮುಲ್ಲಾ, ಜಗದೀಶ್, ಜಿಕೆಎಂ ಸುನೀತಾ, ಗ್ರಾಮ ಪಂಚಾಯತಿ ಸಿಬ್ಬಂದಿಗಳು, ಮೇಟಿಗಳು ಹಾಗೂ ಕೂಲಿ ಕಾರ್ಮಿಕರು ಉಪಸ್ಥಿತರಿದ್ದರು.

# ಸಿಎಂ ಗೊಂದಲ ಹೈಕಮಾಂಡ್ ಬಗೆಹರಿಸಲಿ

**ನೈಜ್ಯ ದೆಸೆ ನ್ಯೂಸ್**

ಮೈಸೂರು: ಮಾಜಿ ಸಚಿವ ಕೆ.ಎನ್. ರಾಜಣ್ಣ ಅವರು ಸಿಎಂ ಅಧಿಕಾರದಲ್ಲಿ ಉಳಿಯುವಂತೆ ಕೇಂದ್ರ ಕಾಂಗ್ರೆಸ್ ಮುಖಂಡರು ಹಸಿರು ನಿಶಾನೆ ತೋರಿಸಬೇಕು ಅಥವಾ 'ಇಲ್ಲ, ನಾವು ಬದಲಾವಣೆ ಮಾಡುತ್ತೇವೆ' ಎಂದು ಖಚಿತವಾಗಿ ಹೇಳಬೇಕು ಎಂದು ಆಗ್ರಹಿಸಿದ್ದಾರೆ.

ಮೈಸೂರಿನಲ್ಲಿ ಮಾತನಾಡಿದ ಅವರು, "ನಾನು ಸಿಎಂ ಬದಲಾಗುತ್ತಾರೆ ಎಂದು ಹೇಳುತ್ತಿಲ್ಲ, ಅವರು ಅಧಿಕಾರದಲ್ಲಿ ಉಳಿಯುತ್ತಾರೆ ಎಂದು ಹೇಳುತ್ತಿಲ್ಲ. ಆದರೆ ಹೈಕಮಾಂಡ್ ಸಿಎಂಗೆ ನೀವು ಸಂಪೂರ್ಣವಾಗಿ ಸ್ವತಂತ್ರರು ಮತ್ತು ಅಧಿಕಾರದಲ್ಲಿರಿ ಎಂದು ಹಸಿರು ನಿಶಾನೆ ತೋರಿಸಬೇಕು. 'ಇಲ್ಲ, ನಾವು ಬದಲಾವಣೆ ಮಾಡುತ್ತೇವೆ' ಎಂದು



ಸ್ಪಷ್ಟಪಡಿಸಬೇಕು.ಇಬ್ಬರ ನಡುವೆ ಗೊಂದಲವಿದ್ದರೆ, ಇಂತಹ ಎಲ್ಲಾ ರೀತಿಯ ಸಮಸ್ಯೆಗಳು ಉದ್ಭವಿಸುತ್ತವೆ" ಎಂದು ಅವರು ಹೇಳಿದ್ದಾರೆ.

ಕಾಂಗ್ರೆಸ್ ಹೈಕಮಾಂಡ್ ಸಾಧ್ಯವಾದಷ್ಟು ಬೇಗ ಮತ್ತು ಎಚ್ಚ–ರಿಕೆಯಿಂದ ನಿರ್ಧಾರ ತೆಗೆದುಕೊಳ್ಳಬೇಕು. ನಿರ್ಧಾರ ವಿಳಂಬವಾದಷ್ಟೂ ಅದು ಪಕ್ಷ ಮತ್ತು ಸರ್ಕಾರದ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ. ಡಿ.ಕೆ. ಶಿವಕುಮಾರ್ ಅವರಿಗೆ ಇದರಲ್ಲಿ ಆಸಕ್ತಿ ಇರುವುದು ಸಹಜ. ಅವರು ನಮ್ಮ ಪಕ್ಷದ ಅಧ್ಯಕ್ಷರು. ಅದಕ್ಕಾಗಿಯೇ ಅವರು ಮುಖ್ಯಮಂತ್ರಿ ಹುದ್ದೆಯ ಬಗ್ಗೆ ತುಂಬಾ ಆಸಕ್ತಿ ಹೊಂದಿದ್ದಾರೆ. ಅದು ಕೂಡ ತಪ್ಪಲ್ಲ ಎಂದು ಅವರು ಹೇಳಿದ್ದಾರೆ.

# ಮುಂಬೈ ಇಂಡಿಯನ್ಸ್‌ಗೆ ರೋಹಿತ್ ಶರ್ಮ ನಾಯಕ..?

**ನೈಜ್ಯ ದೆಸೆ ನ್ಯೂಸ್**

ನವದೆಹಲಿ: ಪ್ರಸಕ್ತ ಐಪಿಎಲ್ ಟೂರ್ನಿಯ ಅಂಕ ಪಟ್ಟಿಯಲ್ಲಿ 9ನೇ ಸ್ಥಾನದಲ್ಲಿರುವ ಮುಂಬೈ ಇಂಡಿಯನ್?ಸ ನಾಯಕನಾಗಿ ರೋಹಿತ್ ಶರ್ಮಾ ಮರಳಿ ಬರುವ ಸಾಧ್ಯತೆಗಳಿವೆ. ಬೆನ್ನು ನೋವಿನಿಂದ ಮುಂಬೈ ಇಂಡಿಯನ್ಸ್ ತಂಡದ ನಾಯಕ ಹಾರ್ದಿಕ್ ಪಾಂಡ್ಯ ಕೆಲವು ಪಂದ್ಯಗಳಿಂದ ಬಿಡುವು ಪಡೆದಿರುವುದರಿಂದ ಎಲ್–ಎಸ್‌ಜಿ ತಂಡದ ವಿರುದ್ಧದ ಪಂದ್ಯದಲ್ಲಿ ಸೂರ್ಯಕುಮಾರ್ ಯಾದವ್ ಅವರು ತಂಡವನ್ನು ಮುನ್ನಡೆಸಿದ್ದರು.

ಈಗ ಸೂರ್ಯಕುಮಾರ್ ಯಾದವ್ ಅವರು ಮಗುವಿನ ನಿರೀಕ್ಷೆಯಲ್ಲಿದ್ದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಅವರು ಅಲಭ್ಯರಾಗಲಿದ್ದು, ತಂಡಕ್ಕೆ 5 ಬಾರಿ ಚಾಂಪಿಯನ್‌ಪಟ್ಟ ದಕ್ಕಿಸಿಕೊಟ್ಟಿರುವ ರೋಹಿತ್ ತಂಡದ




ನಾಯಕರಾಗುವ ಸಾಧ್ಯತೆಗಳಿವೆ.

ದೇವದತ್ ಪಡಿಕ್ಕಲ್ ಇನ್ನಿಂಗ್ಸ್ ಆರಂಭಿಸಲಿ: ಕ್ಲಾಸ್ ಆಟಗಾರ ವಿರಾಟ್ ಕೊಹ್ಲಿಯೊಂದಿಗೆ ದೇವದತ್ ಪಡಿಕ್ಕಲ್ ಅವರು ಇನ್ನಿಂಗ್?ಸ ಆರಂಭಿಸಬೇಕು ಎಂದು ಟೀಮ್ ಇಂಡಿ–ಯಾದ ಮಾಜಿ ನಾಯಕ ಕೃಷ್ಣಮಾಚಾರಿ ಶ್ರೀಕಾಂತ್ ಅವರು ಹೇಳಿದ್ದಾರೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಕಳೆದ ಕೆಲವು ಪಂದ್ಯಗಳಲ್ಲಿ ಮಧ್ಯಮ ಕ್ರಮಾಂಕದಲ್ಲಿ ಬ್ಯಾಟಿಂಗ್ ಸಮಸ್ಯೆ ಎದುರಿಸುತ್ತಿದ್ದು, ಈ ಸಮಸ್ಯೆಯನ್ನು ನಿವಾರಿಸಿಕೊಳ್ಳಲು ಜೇಕಬ್ ಬೇಥಲ್‌ರನ್ನು ಮಧ್ಯಮ ಕ್ರಮಾಂಕದಲ್ಲಿ ಆಡಿಸಿ ಪಡಿಕ್ಕಲ್‌ರನ್ನು ಆರಂಭಿಕನಾಗಿ ಕಣಕ್ಕಿಳಿಸಬೇಕು ಎಂದು ಶ್ರೀಕಾಂತ್ ಹೇಳಿದ್ದಾರೆ.

# ಕುಡಿಯುವ ನೀರಿನ ಸಮಸ್ಯೆಗಳಿಗೆ ಪ್ರಥಮ ಆದ್ಯತೆ ನೀಡಿ: ಡಿಸಿ. ಪೂವಿತಾ ಎಸ್

**ನೈಜ್ಯ ದೆಸೆ ನ್ಯೂಸ್**

ರಾಯಚೂರು: ಬೇಸಿಗೆ ಇರುವುದರಿಂದ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಗಳಿಗೆ ಪ್ರಥಮ ಆದ್ಯತೆ ನೀಡುವ ಮೂಲಕ ಜಿಲ್ಲೆಯ ಜನರಿಗೆ ಕುಡಿಯುವ ನೀರಿನ ಸಮಸ್ಯೆಗಳಾಗದಂತೆ ನೋಡಿಕೊಳ್ಳಬೇಕೆಂದು ಜಿಲ್ಲಾಧಿಕಾರಿ ಪೂವಿತಾ ಎಸ್. ಹೇಳಿದರು. ಅವರು ಗುರುವಾರ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಜಿಲ್ಲೆಯ ಕುಡಿಯುವ ನೀರಿನ ಸಮಸ್ಯೆ. ಬಿಸಿಗಾಳಿ ಹಾಗೂ ಜಾನುವಾರುಗಳಿಗೆ ಮೇವಿನ ಲಭ್ಯತೆ ಕುರಿತು ಚರ್ಚಿಸಲು ಅಧಿಕಾರಿಗಳಿಗೆ ಕರೆದ ಸಭೆಯಲ್ಲಿ ಅಧ್ಯಕ್ಷತೆವಹಿಸಿ ಮಾತನಾಡಿದರು.

ರಾಯಚೂರು ಜಿಲ್ಲೆಯ ಯಾವುದೇ ತಾಲ್ಲೂಕಿನಲ್ಲಿ ನೀರಿನ ಸಮಸ್ಯೆಗಳಿರುವ ಗ್ರಾಮಗಳನ್ನು ಗುರುತಿಸಿ ಮುಂಜಾಗ್ರತೆವಹಿಸಬೇಕು. ಈ ಕು–



ರಿತು ಮಾಹಿತಿ ಪಡೆಯಲು ಪ್ರತಿ ಸೋಮವಾರ ವಿಸಿ ಮೂಲಕ ಸಭೆ ಕರೆಯುತ್ತೇನೆ ತಾವು ಇಲ್ಲಿಗೆ ಬರುವುದು ಬೇಕಿಲ್ಲ ಆಯಾ ತಾಲ್ಲೂಕಿನ ಅಧಿಕಾ–ರಿಗಳು ತಾವಿದ್ದ ಸ್ಥಳದಿಂದಲೇ ಮಾಹಿತಿ ಕೊಡಬೇಕು. ಕುಡಿಯುವ ನೀರಿನ ಸಹಾಯವಾಣಿಯಿಂದ ಬರುವ ಕರೆಗಳಿಗೆ ತಕ್ಷಣ ಸ್ಪಂದಿಸಬೇಕು ಎಂದರು. ನೀರಿನ ಸಮಸ್ಯೆಗಳಿರುವ ಕಡೆ ಖಾಸಗಿ ಬೋರವೆಲ್ ಮತ್ತು ಟ್ಯಾಂಕರಗಳ ಮೂಲಕ ಜನರಿಗೆ ನೀರು ಕೊಡುವ ಕೆಲಸ ಮಾಡಬೇಕು. ನೀರಿನ ಗುಣಮಟ್ಟವನ್ನು ಪರೀಕ್ಷೆ ಮಾಡಬೇಕು.

ಜಿಲ್ಲೆಯ ಯಾವ– ಯಾವ ಭಾಗದಿಂದ ಸಮಸ್ಯೆಗಳು ಬರುತ್ತವೆ ಎನ್ನುವುದರ ಕು–ರಿತು ಪಟ್ಟಿ ಮಾಡಿ. ಕುಡಿಯುವ ನೀರಿಗೆ ಸಂಬಂಧಿಸಿದಂತೆ ಯಾವುದಾದರು ರಿಪೇರಿ ಸೇ–ರಿದಂತೆ ಇತರೆ ಎನಾದರು ಕೆಲಸ ಇದ್ದಲ್ಲಿ ಆಯಾ ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾ–ರಿಗಳಿಗೆ ಪ್ರಪೋಸಲ್ ಕೊಡಿ. ಇತರೆ ಯಾವುದೇ ಸಮಸ್ಯೆಗಳಿದ್ದರೆ ನಮ್ಮ ಗಮನಕ್ಕೆ ತರಬೇಕು. ಜಾನುವಾರುಗಳಿಗೆ ಮೇವಿನ ಸಮಸ್ಯೆಗಳಾಗದಂತೆ ನೋಡಿಕೊಳ್ಳಬೇಕೆಂದು ಹೇಳಿದರು.

ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ ಕಾಂದೂ ಮಾತನಾಡಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಗಳ ಕುರಿತು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಸರಿಯಾದ ಮಾಹಿತಿ ನೀಡಬೇಕು. ಗ್ರಾಮ ಮತ್ತು ನಗರ ಪ್ರದೇಶಗಳಲ್ಲಿ ನೀರಿನ ಸಮಸ್ಯೆಗಳಾಗಬಾರದು ಇದಕ್ಕೆ ಯಾವುದೇ ಅನುದಾನದ ಕೊರತೆ ಇಲ್ಲ ಈ ಕುರಿತು ಅಧಿಕಾ–ರಿಗಳು ಹೆಚ್ಚಿನ ಗಮನಹರಿಸಬೇಕೆಂದು ಹೇಳಿದರು. ಈ ಸಭೆಯಲ್ಲಿ ಮಹಾನಗರ ಪಾಲಿಕೆ ಆಯುಕ್ತರಾದ ಜುಬಿನ್ ಮೋಹಪಾತ್ರ. ಸಹಾಯಕ ಆಯುಕ್ತರಾದ ಹಂಪಣ್ಣ ಸಜ್ಜನ. ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕರಾದ ಶರಣಬಸವರಾಜು. ರಾಯಚೂರು ತಾಲ್ಲೂಕು ತಹಶಿಲ್ದಾರ ಸುರೇಶ ವರ್ಮಾ ಸೇರಿದಂತೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ವಿವಿಧ ಇಲಾಖೆಗೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಸಾಹಿತ್ಯ ಸಿಂಚನ

.....ಕೊನೆ ಯಾತ್ರೆ.....

ಬಂದೆ ಅಳುತ್ತಾ ಈ ಲೋಕಕ್ಕೆ
ಹೋಗುವಾಗ ನಗು ಬಿಟ್ಟು ಹೋಗು

ಈ ದೇಹ ಮಣ್ಣಿಗೆ ಸೇರಬಹುದು
ಆದ್ರೆ ನೀ ಬಿಟ್ಟ ನೆನಪು...
ಅದು ಗಾಳಿಯಾಗಿ, ಮಳೆಯಾಗಿ
ನಮ್ಮ ಉಸಿರಲ್ಲಿ ಉಳಿಯುತ್ತೆ

ಕೊನೆ ಯಾತ್ರೆ ಅಂತ ಅಳಬೇಡ
ಅದು ಬಿಡುಗಡೆಯ ಪಯಣ
ನೋವಿನ ಸಂಕೋಲೆಯಿಂದ ಬಿಡಿಸಿ
ಶಾಂತಿಯ ತೆಕ್ಕೆಗೆ ಕರೆದೊಯ್ಯೋ ದಾರಿ

ನಾಲ್ಕು ಹೆಗಲು ಸಾಕು ನಿನ್ನ ಹೊರಲು
ಆದ್ರೆ ನಿನ್ನ ಪ್ರೀತಿ ಹೊರಲು
ಈ ಊರಿಗೆ ಏಳು ಜನ್ಮ ಸಾಲದು

ಕಣ್ಣೀರು ಸುರಿಸಿ ಕಳಿಸಲ್ಲ ನಾವು
ಹೂ ಮಳೆ ಸುರಿಸಿ ಕಳಿಸ್ತೀವಿ
"ಮತ್ತೆ ಸಿಗೋಣ" ಅಂತ ಮಾತು ಕೊಟ್ಟು
ಚುಕ್ಕಿಯಾಗಿ ಆಕಾಶ ಸೇರು

ಕೊನೆ ಅಲ್ಲ ಇದು...
ಒಂದು ಅಧ್ಯಾಯ ಮುಗಿದ ಅಷ್ಟೇ
ನೀ ಕಲಿಸಿದ ಪಾಠ, ನೀ ತೋರಿದ ದಾರಿ
ಯುಗ ಯುಗಕೂ ಬೆಳಕಾಗಿರುತ್ತೆ

ಎಸ್. ದುರಗಪ್ಪ.ಕುಷ್ಟಗಿ.

## 'ಅಂತರ'–ಒಂದು ಇಂಜಕ್ಷನ್ ಕನಿಷ್ಟ ಮೂರು ತಿಂಗಳು ಗರ್ಭಧಾರಣೆ ತಡೆಯುವ ಅತ್ಯಂತ ಸುಲಭ ತಾತ್ಕಾಲಿಕ ಗರ್ಭನಿರೋಧಕ ಚುಚ್ಚುಮದ್ದು.

ನೈಜ್ಯ ದೆಸೆ ನ್ಯೂಸ್

**ಅಂತರ ಎಂಬ ಹೆಸರಿನಿಂದ ಕರೆಯಲ್ಪಡುವ ತಾತ್ಕಾಲಿಕ ಗರ್ಭನಿರೋಧಕ ವಿಧಾನವಾದ "ಅಂತರ ಚುಚ್ಚುಮದ್ದು" ಅತ್ಯಂತ ಸರಳವಾಗಿದ್ದು, ದಂಪತಿಗಳು ತಮ್ಮ ಸೂಕ್ತ ನಿರ್ಧಾರದ ಮೇರೆಗೆ ಮೊದಲ ಹೆರಿಗೆ ನಂತರ ಎರಡನೆಯ ಹೆರಿಗೆಯ ಜನನದ ಅಂತರಕ್ಕಾಗಿ "ಅಂತರ ಚುಚ್ಚುಮದ್ದು" ನ್ನು ಸದುಪಯೋಗ ಪಡೆದುಕೊಳ್ಳಿ ಎಂದು ಎಲ್‌ಬಿಎಸ್ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ ಸುನೀತಾ ತಿಳಿಸಿದರು.**

ರಾಯಚೂರು ನಗರದ ಮಡ್ಡಿಪೇಟ್ ನಲ್ಲಿ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಲ್ಲಿ ಭಾಗವಹಿಸಿದ ತಾಯಂದಿರನ್ನು ಉದ್ದೇಶಿಸಿ ಮಾತನಾಡಿ ಮದುವೆ ನಂತರ ಮೊದಲ ಮಗುವಿನ ಜನನದ ನಂತರ ದಂಪತಿಗಳು ತಾಯಿ ಮಗುವಿನ ಆರೋಗ್ಯ ದೃಷ್ಟಿಯಿಂದ ಎರಡನೆಯ ಮಗುವಿನ ಜನನವು ಕನಿಷ್ಠ 3 ವರ್ಷಗಳ ನಂತರ ಇರಲಿ ಎಂದು ನಿರ್ಧ–ರಿಸಿದಾಗ, ಒಂದು ಡೋಸ್ ಮೂಲಕ ಮೂರು




ತಿಂಗಳವರೆಗೆ ಗರ್ಭಧಾರಣೆಯನ್ನು ತಡೆಯುವ ಅಂತರ ಚುಚ್ಚುಮದ್ದು ಎಲ್‌ಬಿಎಸ್ ನಗರ ಪ್ರಾಥಮಿಕ ಅರೋಗ್ಯ ಕೇಂದ್ರ ಸೇರಿದಂತೆ ಎಲ್ಲ ಸರಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಲಭ್ಯವಿದ್ದು ಇದರ ಸದುಪಯೋಗಕ್ಕಾಗಿ ವಿನಂತಿಸಿದರು.

ಭವಿಷ್ಯದಲ್ಲಿ ಗರ್ಭಕಂಠದ ಕ್ಯಾನ್ಸರ್ ತಡೆಗೆ ಲಸಿಕೆ ಹಾಕಿಸಿ ವೈದ್ಯರು ನಿರ್ಧರಿಸುವ ರೋಗಗಳ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಕೆಲವರು ತಾವೇ ವೈದ್ಯರಂತೆ ಬಿಂಬಿಸಿಕೊಂಡು ತಪ್ಪು ಮಾಹಿತಿ ನೀಡುವುದನ್ನು ನಂಬದೆ, ದಯವಿಟ್ಟು ಭವಿಷ್ಯದಲ್ಲಿ ಹೆಣ್ಣು ಮಕ್ಕಳನ್ನು ಗರ್ಭಕಂಠದ ಕ್ಯಾನ್ಸರ್‌ನಿಂದ ಮುಕ್ತಗೊಳಿಸಲು ನೆಮ್ಮದಿಯ ಜೀವನ ನಡೆಸಲು ಪ್ರಸ್ತುತ ಸರಕಾರ ಮಾರ್ಗಸೂಚಿಯಂತೆ 14 ವರ್ಷದ ಹೆಣ್ಣು ಮಕ್ಕಳಿಗೆ ಹಾಕಲಾಗುವ ಹೆಚ್.ಪಿ.ವಿ ಲಸಿಕೆಯನ್ನು ಪಾಲಕರು ಯಾವುದೆ ಹಿಂದೇಟು ಹಾಕದೆ ನಿಮ್ಮ ಮಗಳ ಸುರಕ್ಷತೆಗಾಗಿ ಉಚಿತವಾಗಿ



ಹಾಕಿಸಿ ಎಂದು ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ ವಿನಂತಿಸಿದರು.

ಈ ಸಂದರ್ಭದಲ್ಲಿ ಮಕ್ಕಳಿಗೆ ಹಾಕುವ ಲಸಿಕೆಗಳ ಮಹತ್ವ, ಬೇಸಿಗೆ ಮುಂಜಾಗೃತೆ, ಓಆರ್‌ಎಸ್ ಬಳಕೆ, ಕೈ ತೊಳೆಯುವ ವಿಧಾನ ಕುರಿತು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳಾದ ನಾಗರಾಜ್, ಸರೋಜಾ ಕೆ, ಮಾತನಾಡಿದರು. ಈ ಸಂದರ್ಭದಲ್ಲಿ ಐಸಿಡಿಎಸ್ ಮೇಲ್ವಿಚಾರಕಿ ಭಾರತಿ, ಪಿಹೆಚ್‌ಸಿಓ ತಾರಾ, ಲಮಂಜುಳಾ, ಆಶಾ ಕಾರ್ಯಕರ್ತೆ ಲಕ್ಷ್ಮೀ, ತ್ರಿವೇಣಿ, ಲಕ್ಷ್ಮೀ, ಅಂಗನವಾಡಿ ಕಾರ್ಯಕರ್ತೆ ನಿರ್ಮಲಾ, ಆಸ್ಮಾ, ಸುಲ್ತಾನ್‌ಬಾನು ಸೇರಿದಂತೆ ತಾಯಂದಿರು ಸಾರ್ವಜನಿಕರು ಉಪಸ್ಥಿತರಿದ್ದರು.

## ಜನಪರ ಕಾಳಜಿವುಳ್ಳ ಬಸನಗೌಡ ಬಾದರ್ಲಿಯವರಿಗೆ ಸಚಿವ ಸ್ಥಾನ ನೀಡುವಂತೆ ಭೋವಿ ಸಮಾಜ ಒತ್ತಾಯ




ನೈಜ್ಯ ದೆಸೆ ನ್ಯೂಸ್

**ಉತ್ತರ ಕರ್ನಾಟಕದ ಪ್ರಥಮ ಯೂತ್ ಕಾಂಗ್ರೆಸ್‌ನ ರಾಜ್ಯಾಧ್ಯಕ್ಷರಾಗಿ ರಾಜ್ಯದಲ್ಲಿ ಉತ್ತಮ ಕಾರ್ಯ ನಿರ್ವಹಿಸಿ, ಸಿಂಧನೂರು ಕ್ಷೇತ್ರದಲ್ಲಿಯೂ ಕೂಡ ತಮ್ಮದೇಯಾದ ಛಾಪು ಮೂಡಿಸಿ, ಹಿತಿಯನ್ನ ಯುವಕರನ್ನು ಒಗ್ಗೂಡಿಸಿಕೊಂಡು ಪಕ್ಷ ಸಂಘಟಿಸಿದ ನಾಯಕರಾಗಿದ್ದಾರೆ ಎಂದು ಭೋವಿ ಸಮಾಜದ ಯುವ ಮುಖಂಡ ಪ್ರಕಾಶ ಹೇಳಿದರು.**

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕೆಪಿಸಿಸಿ ಹಾಗೂ ಎಐಸಿಸಿ ಸೂಚನೆ ಮೇರೆಗೆ ಹಾಗೂ ಪಕ್ಷ ವಹಿಸಿದ ಎಲ್ಲಾ ಕೆಲಸ ಕಾರ್ಯಗಳನ್ನು ತಮ್ಮದೇಯಾದ ವಿಭಿನ್ನ ರೀತಿಯಲ್ಲಿ ಬಹಳಷ್ಟು ಕಟ್ಟುನಿಟ್ಟಾಗಿ, ಅಚ್ಚುಕಟ್ಟಾಗಿ, ಮಾಡುತ್ತಿದ್ದು, ಅಲ್ಲದೇ ತಾಲೂಕಿನ ಸಮಸ್ಯೆಗಳ ಬಗ್ಗೆ ಅಧಿವೇಶನದಲ್ಲಿ ಗಟ್ಟಿ ಧ್ವನಿ ಎತ್ತಿ ಅದರಲ್ಲಿ ಬಹುತೇಕ ಕೆಲಸಗಳನ್ನು ಕಾರ್ಯಗತವಾಗಿಸುವುದರಲ್ಲಿ ಶ್ರಮಿಸಿ, ಜನರ ಹಿತ ಕಾಯಲು ಮುಂದಾಗಿದ್ದು, ಕ್ಷೇತ್ರದ ಜನರು ಬಹಳಷ್ಟು ನೆಮ್ಮದಿಯಾಗಿರಬೇಕು ಮೂಲಭೂತ ಸೌಕರ್ಯಗಳು ಒದಗಿಸಬೇಕೆಂಬ ಇಚ್ಚೆವುಳ್ಳರಾಗಿದ್ದು, ಪಕ್ಷದಲ್ಲಿ ಯುವಕರಾಗಿದ್ದು, ಪಕ್ಷಕ್ಕಾಗಿ ದುಡಿಯುವ ಪ್ರಾಮಾಣಿಕ ಸೇವೆಯನ್ನು ಗುರುತಿಸಿ ಪಕ್ಷದ ಹೈಕಮಾಂಡ್ ನವರು ಅವರಿಗೆ ಉನ್ನತವಾದ ಸಚಿವ ಸ್ಥಾನಮಾನವನ್ನು ನೀಡಬೇಕು.

ಮೇ.,3 ರಂದು ನಡೆದ ತಮ್ಮ ಬಸನಗೌಡ ಬಾದರ್ಲಿ ಫೌಂಡೇಶನ್ ವತಿಯಿಂದ 151 ಸಾಮೂಹಿಕ ವಿವಾಹ, 5001 ಮುತ್ತೈದೆಯರಿಗೆ ಹುಡಿ ತುಂಬುವುದು ಹಾಗೂ ಅವರ ಒಂದು ವರ್ಷದ ಸಾಧನೆಯ ಪುಸ್ತಕದ ಕೈಪಿಡಿ ಬಿಡುಗಡೆಗೊಳಿಸಿ 50 ಸಾವಿರಕ್ಕೂ ಹೆಚ್ಚು ಜನಸಂಖ್ಯೆ ಸಮ್ಮುಖದಲ್ಲಿ ಒಂದು ಐತಿಹಾಸಿಕ ಕಾರ್ಯಕ್ರಮವನ್ನು ಮಾಡಿ ಯಶಸ್ವಿಗೊಳಿಸಿದರು. ಇಂತಹ ಜನಪರ ಕಾಳಜಿ ಇರುವ ಜನನಾಯಕರಿಗೆ ಹೈಕಮಾಂಡ್ ಸಚಿವ ಸ್ಥಾನ ನೀಡಬೇಕೆಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ: ಅಶೋಕ, ವೀರೇಶ ಸಿದ್ರಾಂಪುರ, ರಡ್ಡೆಪ್ಪ ಸೋಮಲಾಪುರ, ಅಯ್ಯಪ್ಪ ಯದ್ದಲದೊಡ್ಡಿ, ಶರಣಪ್ಪ ಯದ್ದಲದೊಡ್ಡಿ, ಸಿದ್ದಪ್ಪ ಯದ್ದಲದೊಡ್ಡಿ, ಮಾರುತಿ, ಬಾಲರಾಜ, ಸೇರಿದಂತೆ ಸಮಾಜದ ಅನೇಕ ಮುಖಂಡರು ಇದ್ದರು.

## ಹುಲಿಗೆಮ್ಮದೇವಿ ಹಾಗೂ ಶ್ರೀ ಗದ್ಯಮ್ಮದೇವಿಯ ಜಾತ್ರಾ ಮಹೋತ್ಸವ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ವಿಜಯಪುರ ಜಿಲ್ಲೆಯ ತಾಳಿಕೋಟಿ ನಗರದಲ್ಲಿ ಶ್ರೀ ಸಿದ್ದರಾಮೇಶ್ವರ ಭೋವಿ ವಡ್ಡರ ಸಮಾಜ ಕ್ಷೇಮಾಭಿವೃದ್ಧಿ ಸಂಘದ (ರಿ) ವತಿಯಿಂದ ಶ್ರೀ ಹುಲಿಗೆಮ್ಮದೇವಿ ಮತ್ತು ಶ್ರೀ ಗದ್ಯಮ್ಮದೇವಿ ಜಾತ್ರಾ ಮಹೋತ್ಸವವು ಮೇ 11 ಮತ್ತು 12 ರಂದು ಅತ್ಯಂತ ಸಡಗರ ಸಂಭ್ರಮದಿಂದ ಜರುಗಲಿದೆ. ಮೇ 11: ಪದಗ್ರಹಣ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಮೇ 11, 2026ರ ಸೋಮವಾರ ಸಾಯಂಕಾಲ 6:00 ಘಂಟೆಗೆ ಧರ್ಮಸಭೆ ಹಾಗೂ ಶ್ರೀ ಸಿದ್ದರಾಮೇಶ್ವರ ಭೋವಿ ವಡ್ಡರ ಸಮಾಜ ಕ್ಷೇಮಾಭಿವೃದ್ಧಿ ಸಂಘದ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ನಡೆಯಲಿದೆ.**

ಈ ಕಾರ್ಯಕ್ರಮದಲ್ಲಿ ಸುರಪುರ ಮತಕ್ಷೇತ್ರದ ಮಾಜಿ ಶಾಸಕ ನರಸಿಂಹ ನಾಯಕ (ರಾಜುಗೌಡ) ಅವರನ್ನು ಒಳಗೊಂಡು ವಿವಿಧ ಪಕ್ಷಗಳ ರಾಜಕೀಯ ಮುಖಂಡರು ಹಾಗೂ ಗಣ್ಯರು ಭಾಗವಹಿಸಲಿದ್ದಾರೆ. ಮಧ್ಯಾಹ್ನ 1 ಗಂಟೆಯಿಂದ ಸಾರ್ವಜನಿಕ ಅನ್ನಪ್ರಸಾದ ಸೇವೆ ಇರಲಿದ್ದು, ರಾತ್ರಿ 9:00 ಗಂಟೆಗೆ ರಸಮಂಜರಿ ಕಾರ್ಯಕ್ರಮ ಇರುವುದು. ಮೇ 12: ಭವ್ಯ ರಥೋತ್ಸವ ಮತ್ತು ಮೆರವಣಿಗೆ. ಮೇ 12, 2026ರ ಮಂಗಳವಾರ ಮುಂಜಾನೆ 11:00 ಗಂಟೆಯಿಂದ ಶ್ರೀ ದೇವಿಯ ಭವ್ಯ ಮೆರವಣಿಗೆ ಆರಂಭವಾಗಲಿದೆ. ಶ್ರೀ ಅಂಬಾಭವಾನಿ ದೇವಸ್ಥಾನದಿಂದ ಹೊರಡುವ ದೇವಿಯ ರಥೋತ್ಸವವು ವಾದ್ಯ ವೈಭವದೊಂದಿಗೆ ಕತ್ರಿ ಬಜಾರ, ರಾಜವಾಡೆ (ಪಂಚ್ ಶಹೀದ ದರ್ಗಾ) ಮಾರ್ಗವಾಗಿ ಸಾಗಿ ಭೋವಿ ಸಮಾಜದ ಶ್ರೀ ದೇವಿಯ ಗರ್ಭಗುಡಿಯನ್ನು ಪ್ರವೇಶಿಸಲಿದೆ. ಸಮಾಜದ ಮುಖಂಡರ ಉಪಸ್ಥಿತಿ: ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗೌರವಾಧ್ಯಕ್ಷರಾದ ದ್ಯಾಪಪ್ಪ ಎಚ್ . ಕೂಚಬಾಳ,ಅಧ್ಯಕ್ಷರಾದ ಶ್ರೀನಿವಾಸ.ಡಿ ಕುಲಕರ್ಣಿ ವಹಿಸಲಿದ್ದಾರೆ. ಉಪಾಧ್ಯಕ್ಷರಾದ ಶ್ರೀಕಾಂತ ಚಿಂಚೋಳಿ, ಕಾರ್ಯದರ್ಶಿ ಪ್ರಕಾಶ ಡಿ. ಕೂಚಬಾಳ, ಸಂಚಾಲಕರಾದ ಶಿವರಾಜ ಬಳಬಾಟ, ಹಾಗೂ ಪ್ರಧಾನ ಕಾರ್ಯದರ್ಶಿ ಭೀಮಸಿ ಕಾರಕೂನ, ದೇವಪ್ಪ ಕಟ್ಟಿಮನಿ ಸೇರಿದಂತೆ ಸಮಾಜದ ಎಲ್ಲಾ ಪದಾಧಿಕಾರಿಗಳು ಮತ್ತು ಸದಸ್ಯರು ಉಪಸ್ಥಿತರಿರಲಿದ್ದಾರೆ. ಭೋವಿ ವಡ್ಡರ ಸಮಾಜದ ಬಾಂಧವರು ಹಾಗೂ ಸರ್ವ ಭಕ್ತಾದಿಗಳು ಈ ಜಾತ್ರಾ ಮಹೋತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ದೇವಿಯ ಕೃಪೆಗೆ ಪಾತ್ರರಾಗಬೇಕೆಂದು ಸಂಘದ ಎಲ್ಲ ಪದಾಧಿಕಾರಿಗಳು ಹಾಗೂ ಸಮಾಜದ ಮುಖಂಡರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್‌ನಲ್ಲಿ "ಬೆಂಕಿಯಿಲ್ಲದ ಅಡುಗೆ" ಕಾರ್ಯಕ್ರಮ ಅರ್ಥಪೂರ್ಣವಾಗಿ ಆಚರಣೆ

ನೈಜ್ಯ ದೆಸೆ ನ್ಯೂಸ್

**ನರ್ಸಸ್ ವೀಕ್ ಆಚರಣೆಯ ಅಂಗವಾಗಿ ಸನ್ ರೈಸ್ ಗ್ರೂಪ್ ಆಫ್ ಇನ್ಸಿಟ್ಯೂಷನ್‌ನ Sun Rise School of Nursing ನಲ್ಲಿ "ಪೌಷ್ಟಿಕತೆ ಎಂಬ ನವೀನತೆ" ಎಂಬ ಶೀರ್ಷಿಕೆಯಡಿಯಲ್ಲಿ "ಬೆಂಕಿಯಿಲ್ಲದ ಅಡುಗೆ" ಕಾರ್ಯಕ್ರಮವನ್ನು ಅತ್ಯಂತ ವೈಶಿಷ್ಟ್ಯಪೂರ್ಣವಾಗಿ ಆಯೋಜಿಸಲಾಯಿತು.**

ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಯಾವುದೇ ಬೆಂಕಿಯ ಸಹಾಯವಿಲ್ಲದೆ ಅನೇಕ ವಿಧವಾದ ಪೌಷ್ಟಿಕ ಆಹಾರಗಳನ್ನು ತಯಾರಿಸಿ ತಮ್ಮ ಸೃಜನಶೀಲತೆಯನ್ನು ಪ್ರದರ್ಶಿಸಿದರು. ಆರೋಗ್ಯಕರ ಜೀವನಶೈಲಿಗೆ ಪೌಷ್ಟಿಕ ಆಹಾರದ ಮಹತ್ವವನ್ನು ವಿನೂತನ ರೀತಿಯಲ್ಲಿ ಪರಿಚಯಿಸಿದ



ವಿದ್ಯಾರ್ಥಿಗಳು, ಹಣ್ಣುಗಳು, ತರಕಾರಿಗಳು, ಮೊಸರು ಆಧಾರಿತ ತಿನಿಸುಗಳು, ಆರೋಗ್ಯಕರ ತಿಂಡಿಗಳು ಹಾಗೂ ಸಾಂಪ್ರದಾಯಿಕ ಆಹಾರಗಳ ಹೊಸ ರೂಪಗಳನ್ನು ಆಕರ್ಷಕವಾಗಿ ಸಿದ್ಧಪಡಿಸಿದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಇರ್ಫಾನ್ ಕೆ ಅತ್ತಾರ್ ಹಾಗೂ ಕಾರ್ಯದರ್ಶಿಗಳಾದ ಇರ್ಷಾದ್ ಉಪಸ್ಥಿತರಿದ್ದು ವಿದ್ಯಾರ್ಥಿಗಳ ಪ್ರತಿಭೆ ಮತ್ತು ಪರಿಶ್ರಮವನ್ನು ಶ್ಲಾಘಿಸಿದರು. ಕಾಲೇಜಿನ ಪ್ರಾಚಾರ್ಯರಾದ ಲಾಜರ್ ಸಿರಿಲ್ ಜಿ ಅವರು ವಿದ್ಯಾರ್ಥಿಗಳ ಸೃಜನಾತ್ಮಕ ಚಿಂತನೆ ಹಾಗೂ ಆರೋಗ್ಯ ಜಾಗೃತಿಯನ್ನು ಮೆಚ್ಚಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ಪ್ಯಾರಾಮೆಡಿಕಲ್ ಹಾಗೂ ಫಾರ್ಮಸಿ ವಿಭಾಗದ ಉಪನ್ಯಾಸಕರು ವಿದ್ಯಾರ್ಥಿಗಳು ತಯಾರಿಸಿದ ವಿವಿಧ ಆಹಾರಗಳನ್ನು ಸವಿದು, ರುಚಿ, ಪೌಷ್ಟಿಕ ಮೌಲ್ಯ, ಸ್ವಚ್ಛತೆ ಮತ್ತು ವಿನೂತನತೆಯನ್ನು ಆಧ–ರಿಸಿ ಅಂಕಗಳನ್ನು ನೀಡಿದರು. ವಿದ್ಯಾರ್ಥಿಗಳ ಉತ್ಸಾಹ, ತಂಡಭಾವ ಮತ್ತು ಸೃಜನಶೀಲತೆ ಕಾರ್ಯಕ್ರಮದ ಯಶಸ್ಸಿಗೆ ಮತ್ತಷ್ಟು ಮೆರುಗು ತಂದಿತು. ಕಾರ್ಯಕ್ರಮದ ಉಸ್ತುವಾರಿಯನ್ನು ಶ್ರೀ ವೀರೇಶ್ ವಹಿಸಿದ್ದರು ಮತ್ತು ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ಉಪನ್ಯಾಸಕರುಗಳು ಅತ್ಯಂತ ಆಸಕ್ತಿಯಿಂದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಒಟ್ಟಾರೆ, ಬೆಂಕಿಯ ಬಳಕೆ ಇಲ್ಲದೆ ತಯಾರಿಸಲಾದ ಬಗೆಬಗೆಯ ಆಹಾರಗಳ ಸುವಾಸನೆಯಿಂದ ಕಾಲೇಜಿನ ವಾತಾವರಣ ಗಮಗಮಿಸುತ್ತಿದ್ದು, ಕಾರ್ಯಕ್ರಮವು ಎಲ್ಲರ ಮನಸ್ಸಿನಲ್ಲಿ ವಿಶೇಷ ಸ್ಥಾನ ಪಡೆದಿತು. "ಪೌಷ್ಟಿಕತೆ ಎಂಬ ನವೀನತೆ" ಕಾರ್ಯಕ್ರಮವು ಆರೋಗ್ಯಕರ ಆಹಾರ ಪದ್ಧತಿಯ ಕುರಿತು ಜಾಗೃತಿ ಮೂಡಿಸುವುದರ ಜೊತೆಗೆ ವಿದ್ಯಾರ್ಥಿಗಳಲ್ಲಿರುವ ಸೃಜನಾತ್ಮಕತೆಯನ್ನು ಉತ್ತೇಜಿಸಿದ ಅರ್ಥ–ಪೂರ್ಣ ಕಾರ್ಯಕ್ರಮವಾಗಿ ಯಶಸ್ವಿಯಾಯಿತು.

## ನ್ಯಾಯಾಲಯದ ಆದೇಶದಂತೆ ಕೆಂಪೇಗೌಡ ಪ್ರತಿಮೆ ಮರು ಪ್ರತಿಷ್ಠಾಪನೆ

ನೈಜ್ಯ ದೆಸೆ ನ್ಯೂಸ್

**ಮಾಗಡಿ: ಪಟ್ಟಣದ ಪುರಸಭೆ ಸಮೀಪ ಸರ್ಕಾರಿ ಆಸ್ಪತ್ರೆ ನಿರ್ಮಾಣ ಕಾಮಗಾರಿಗಾಗಿ ತಾತ್ಕಾಲಿಕವಾಗಿ ತೆರವುಗೊಳಿಸಲಾಗಿದ್ದ ನಾಡಪ್ರಭು ಕೆಂಪೇಗೌಡರ ಪ್ರತಿಮೆಯನ್ನು ನಿನ್ನೆ ಹೊಸ ಸ್ಥಳದಲ್ಲಿ ಯಶಸ್ವಿಯಾಗಿ ಮರು ಪ್ರತಿಷ್ಠಾಪಿಸಲಾಯಿತು.**

ಸುಮಾರು 18 ವರ್ಷಗಳ ಹಿಂದೆ ಕೆಂಪೇಗೌಡ ಅಭಿವೃದ್ಧಿ ಸಮಿತಿ ಅಧ್ಯಕ್ಷ ಎಚ್.ಎಂ. ಕೃಷ್ಣಮೂರ್ತಿ ಅವರ ನೇತೃತ್ವದಲ್ಲಿ ಪ್ರತಿಮೆಯನ್ನು



ಸ್ಥಾಪಿಸಲಾಗಿತ್ತು. ಇದೇ ಸ್ಥಳದಲ್ಲಿ ಹೊಸ ಸರ್ಕಾರಿ ಆಸ್ಪತ್ರೆ ನಿರ್ಮಾಣಕ್ಕೆ ಸರ್ಕಾರ ಮುಂದಾದ ಹಿನ್ನೆಲೆಯಲ್ಲಿ ಪ್ರತಿಮೆಯನ್ನು ಸ್ಥಳಾಂತರಿಸುವಂತೆ ಶಾಸಕ ಎಚ್.ಸಿ. ಬಾಲಕೃಷ್ಣ ಮನವಿ ಮಾಡಿದ್ದರು. ಆರಂಭದಲ್ಲಿ ಪ್ರತಿಮೆ ಸ್ಥಳಾಂತರಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ್ದ ಎಚ್.ಎಂ. ಕೃಷ್ಣಮೂರ್ತಿ ನ್ಯಾಯಾಲಂ ಬದ ಮೆಟ್ಟಿಲೇ–ರಿದ್ದರು. ಪ್ರಕರಣ ವಿಚಾರಣೆ ನಡೆಸಿದ ಹೈಕೋರ್ಟ್, ಸಾರ್ವಜನಿಕ ಹಿತದೃಷ್ಟಿಯಿಂದ ಆಸ್ಪತ್ರೆ ನಿರ್ಮಾಣ ಅಗತ್ಯವೆಂದು ಅಭಿಪ್ರಾಯಪಟ್ಟು ಪ್ರತಿಮೆ ಸ್ಥಳಾಂತರಕ್ಕೆ ಅನುಮತಿ ನೀಡಿತ್ತು.

ನ್ಯಾಯಾಲಯದ ಆದೇಶದ ಅನ್ವಯ ಹಳೆಯ ಸ್ಥಳದಿಂದ ಸುಮಾರು 500 ಮೀಟರ್ ದೂರದಲ್ಲಿ ಹೊಸ ಅಡಿಪಾಯ ನಿರ್ಮಿಸಿ, ಕ್ರೇನ್ ಸಹಾಯದಿಂದ ಪ್ರತಿಮೆಯನ್ನು ಸುರಕ್ಷಿತವಾಗಿ ಸ್ಥಳಾಂತರಿಸಿ ಮರು ಪ್ರತಿಷ್ಠಾಪಿಸಲಾಯಿತು. ಬಳಿಕ ಹೋಮ, ಪೂಜೆ ಹಾಗೂ ವಿಶೇಷ ವಿಧಿವಿಧಾನಗಳು ನೆರವೇರಿಸಲಾಯಿತು.ನ್ಯಾಯಾಲಯದ ನಿರ್ದೇಶನದಂತೆ ಯಾವುದೇ ವಿವಾದಕ್ಕೆ ಆಸ್ಪದ ನೀಡದೆ ಶಾಂತಿಯುತವಾಗಿ ಸ್ಥಳಾಂತರ ಕಾರ್ಯ ಪೂರ್ಣಗೊಂಡಿದೆ ಎಂದು ಗುತ್ತಿಗೆದಾರರು ತಿಳಿಸಿದ್ದಾರೆ.

# ಮೆ 12 ಕ್ಕೆ ರಾಷ್ಟ್ರೀಯ ವಿದ್ಯಾರ್ಥಿ Nurses ದಿನ (Student Nurses Day)

ನೈಜ್ಯ ದೆಸೆ ನ್ಯೂಸ್

**ಮೇ: "ಇಂದಿನ ವಿದ್ಯಾರ್ಥಿ ನರ್ಸ್ ನಾಳೆಯ ಜೀವ ರಕ್ಷಕರು" ರಾಷ್ಟ್ರೀಯ ವಿದ್ಯಾರ್ಥಿ ನರ್ಸ್ ದಿನವು ಪ್ರತಿವರ್ಷ ಮೇ 8 ರಂದು ಆಚರಿಸಲಾಗುತ್ತದೆ. ಈ ವಿಶೇಷ ದಿನವು ಆರೋಗ್ಯ ಸೇವೆಯ ಭವಿಷ್ಯವಾಗಿರುವ ವಿದ್ಯಾರ್ಥಿ ನರ್ಸ್ ಗಳ ಪರಿಶ್ರಮ, ತ್ಯಾಗ, ಶಿಸ್ತು, ಸೇವಾ ಮನೋಭಾವ ಮತ್ತು ಮಾನವೀಯತೆಯನ್ನು ಗೌರವಿಸುವ ದಿನವಾಗಿದೆ. ವೈದ್ಯಕೀಯ ಕ್ಷೇತ್ರದಲ್ಲಿ ತಮ್ಮ ಜೀವನವನ್ನು ಸಮರ್ಪಿಸಲು ತಯಾರಾಗುತ್ತಿರುವ ಎಲ್ಲಾ ನರ್ಸಿಂಗ್ ವಿದ್ಯಾರ್ಥಿಗಳಿಗೆ ಇದು ಹೆಮ್ಮೆಯ ದಿನ.**

ನರ್ಸಿಂಗ್ ಎನ್ನುವುದು ಕೇವಲ ಒಂದು ಉದ್ಯೋಗವಲ್ಲ; ಅದು ಮಾನವೀಯ ಸೇವೆಯ ಮಹಾನ್ ಕರ್ತವ್ಯ. ರೋಗಿಯ ನೋವನ್ನು ಅರ್ಥ–ಮಾಡಿಕೊಳ್ಳುವುದು, ಭಯಗೊಂಡವರಲ್ಲಿ ಧೈರ್ಯ ತುಂಬುವುದು, ಜೀವ ಉಳಿಸಲು ಹಗಲು–ರಾತ್ರಿ ಶ್ರಮಿಸುವುದು ಇವೆಲ್ಲವೂ ಒಬ್ಬ ನರ್ಸ್ ನ ನಿಜವಾದ ಗುರುತು. ಈ ಮಹಾನ್ ಪ್ರಯಾಣದ ಮೊದಲ ಹೆಜ್ಜೆಯನ್ನು ಇಡುವವರು ವಿದ್ಯಾರ್ಥಿ ನರ್ಸ್ ಗಳು.




ಇಂದಿನ ವಿದ್ಯಾರ್ಥಿ ನರ್ಸ್ ಗಳು ಆಧ–ನಿಕ ತಂತ್ರಜ್ಞಾನ, ತುರ್ತು ಚಿಕಿತ್ಸಾ ವಿಧಾನಗಳು, ರೋಗಿಗಳ ಆರೈಕೆ, ಔಷಧ ನಿರ್ವಹಣೆ, ಸಮುದಾಯ ಆರೋಗ್ಯ ಹಾಗೂ ಮಾನಸಿಕ ಆರೈಕೆಯಂತಹ ಅನೇಕ ಕೌಶಲ್ಯಗಳನ್ನು ಕಲಿಯುತ್ತಿದ್ದಾರೆ.

ತರಗತಿಯಲ್ಲಿ ಕಲಿತ ಪಾಠಗಳನ್ನು ಆಸ್ಪತ್ರೆಗಳಲ್ಲಿ ಸೇವೆಯ ಮೂಲಕ ಅನುಭವಿಸುತ್ತಿದ್ದಾರೆ. ಪ್ರತಿಯೊಂದು ಡ್ಯೂಟಿ, ಪ್ರತಿಯೊಂದು ಪ್ರಕರಣ, ಪ್ರತಿಯೊಂದು ರೋಗಿ ಅವರ ಜೀವನದ ಪಾಠವಾಗುತ್ತದೆ. ನರ್ಸಿಂಗ್ ಶಿಕ್ಷಣದ ಮಾರ್ಗ ಸುಲಭವಲ್ಲ. ನಿದ್ರೆಯಿಲ್ಲದ ರಾತ್ರಿ, ಒತ್ತಡದ ತರಬೇತಿ, ಪರೀಕ್ಷೆಗಳು, ಕ್ಲಿನಿಕಲ್ ಪೋಸ್ಟಿಂಗ್, ಹೊಣೆಗಾರಿಕೆ ? ಇವೆಲ್ಲವನ್ನೂ ಎದುರಿಸಿ ಮುಂದೆ ಸಾಗುವ ವಿದ್ಯಾರ್ಥಿಗಳೇ ನಿಜವಾದ ಯೋಧರು. ಆದರೆ ನೆನಪಿಡಿ: "ಒಬ್ಬ ಉತ್ತಮ ಓಣಢಿಝ ಔಷಧ ಮಾತ್ರ ನೀಡುವುದಿಲ್ಲ; ಭರವಸೆ, ಪ್ರೀತಿ ಮತ್ತು ಬದುಕಿನ ಧೈರ್ಯವನ್ನೂ ನೀಡುತ್ತಾರೆ.

ವಿದ್ಯಾರ್ಥಿಗಳೇ, ನಿಮ್ಮ ಯೂನಿಫಾರ್ಮ್ ಕೇವಲ ಬಟ್ಟೆಯಲ್ಲ ಅದು ನಂಬಿಕೆಯ ಸಂಕೇತ. ನಿಮ್ಮ ಐಡಿ ಕಾರ್ಡ್ ಕೇವಲ ಗುರುತಲ್ಲ ಅದು ಸಮಾಜ–ಕ್ಕೆ ಸೇವೆ ಮಾಡುವ ಪ್ರತಿಜ್ಞೆ, ನೀವು ಹಿಡಿಯುವ ಸ್ಟೆಥಸ್ಕೋಪ್ ಕೇವಲ ಉಪಕರಣವಲ್ಲ ಅದು ಸಾವಿರಾರು ಹೃದಯಗಳೊಂದಿಗೆ ನಿಮ್ಮ ಸಂಪರ್ಕ. ಕೆಲವೊಮ್ಮೆ ನಿಮಗೆ ದಣಿವು ಬರಬಹುದು. ಕೆಲವೊಮ್ಮೆ "ನಾನು ಇದನ್ನು ಮಾಡಬಲ್ಲೇನಾ" ಎಂಬ ಪ್ರಶ್ನೆ ಮೂಡಬಹುದು. ಆದರೆ ನೆನಪಿಡಿ: ಪ್ರತಿಯೊಬ್ಬ ಪರಿಣಿತ ಓಣಢಿ–ಝ ಕೂಡ ಒಮ್ಮೆ ವಿದ್ಯಾರ್ಥಿಯೇ ಆಗಿದ್ದರು. ಪ್ರತಿಯೊಂದು ಯಶಸ್ಸಿನ ಹಿಂದೆ ಹೋರಾಟ ಇರುತ್ತದೆ.

ಪ್ರತಿಯೊಂದು ಕಣ್ಣೀ–ರಿನ ಹಿಂದೆ ಒಂದು ಹೊಸ ಶಕ್ತಿ ಹುಟ್ಟುತ್ತದೆ. ನೀವು ಇಂದು ಕಲಿಯುತ್ತಿರುವ ಪ್ರತಿಯೊಂದು ಕೌಶಲ್ಯ ನಾಳೆ ಒಂದು ಜೀವ ಉಳಿಸಬಹುದು. ನಿಮ್ಮ ಸಣ್ಣ ಕಾಳಜಿಯ ಮಾತು ಒಬ್ಬ ರೋಗಿಗೆ ಹೊಸ ಬದುಕಿನ ಆಶೆಯನ್ನು ನೀಡಬಹುದು. ಅದಕ್ಕಾಗಿಯೇ Nursing ಒಂದು ``Profession'' ಮಾತ್ರವಲ್ಲ ಅದು ``Passion with Compassion''. ಇಂದಿನ ದಿನದಲ್ಲಿ ಶಿಕ್ಷಕರು, ಪೋಷಕರು ಮತ್ತು ಸಮಾಜ ಎಲ್ಲರೂ ವಿದ್ಯಾರ್ಥಿ Nurse ಗಳ ಪರಿಶ್ರಮವನ್ನು ಮೆಚ್ಚಬೇಕು. ಏಕೆಂದರೆ ಅವರು ಆರೋಗ್ಯಕರ ಸಮಾಜದ ಭವಿಷ್ಯ ನಿರ್ಮಾಪಕರು. ವಿದ್ಯಾರ್ಥಿಗಳೇ, ದೊಡ್ಡ ಕನಸು ಕಾಣಿರಿ. ಧೈರ್ಯದಿಂದ ಮುಂದೆ ನಡೆಯಿರಿ. ಶಿಸ್ತು, ಜ್ಞಾನ ಮತ್ತು ಮಾನವೀಯತೆಯನ್ನು ನಿಮ್ಮ ಶಕ್ತಿಯನ್ನಾಗಿಸಿಕೊಳ್ಳಿ. ನಿಮ್ಮ ಕೈಗಳಲ್ಲಿ ಸಮಾಜದ ಆರೋಗ್ಯದ ಭವಿಷ್ಯ ಇದೆ.

``White uniform ಧರಿಸಿದ ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ಒಬ್ಬ ಮಹಾನ್ ಸೇವಕ, ಒಬ್ಬ ಜೀವ ರಕ್ಷಕ ಮತ್ತು ಒಬ್ಬ ಸಮಾಜ ನಿರ್ಮಾಪಕ ಅಡಗಿದ್ದಾನೆ." ರಾಷ್ಟ್ರೀಯ ವಿದ್ಯಾರ್ಥಿ Nurs-es ದಿನದ ಹಾರ್ದಿಕ ಶುಭಾಶಯಗಳು! ನಿಮ್ಮ ಸೇವೆ ಮಾನವೀಯತೆಯ ಮಹಾನ್ ರೂಪ.ಆ

## ನೇಮಕಾತಿ ಪ್ರಕಟಣೆ

DHFWS ಯಾದಗಿರಿ ನೇಮಕಾತಿ 2026–32 ವೈದ್ಯಕೀಯ ಅಧಿಕಾರಿಗಳು, ಲ್ಯಾಬ್ ತಂತ್ರಜ್ಞ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಮೇ 7, 2026 DHFWS ಯಾದಗಿರಿ ನೇಮಕಾತಿ 2026: 32 ವೈದ್ಯಕೀಯ ಅಧಿಕಾರಿಗಳು, ಲ್ಯಾಬ್ ತಂತ್ರಜ್ಞ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ ಯಾದಗಿರಿ ಮೇ 2026 ರ DHFWS ಯಾದಗಿರಿ ಅಧಿಕೃತ ಅಧಿಸೂಚನೆಯ ಮೂಲಕ ವೈದ್ಯಕೀಯ ಅಧಿಕಾರಿಗಳು, ಲ್ಯಾಬ್ ತಂತ್ರಜ್ಞ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಯಾದಗಿರಿ ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 20–ಮೇ–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 05–05–2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 20–ಮೇ–2026 ಅಧಿಕೃತ ವೆಬ್‌ಸೈಟ್: yadgir.nic.in

## ತಮಿಳುನಾಡಿನಲ್ಲಿ ಸರ್ಕಾರ ರಚಿಸಲು ದಳಪತಿ ವಿಜಯ್ ಹರಸಾಹಸ

ನೈಜ್ಯ ದೆಸೆ ನ್ಯೂಸ್

**ಚೆನ್ನೈ: ಸರ್ಕಾರ ರಚನೆ ಮಾಡಲು ಅಗತ್ಯವಿರುವ ಶಾಸಕರ ಬೆಂಬಲದ ಸಹಿಯುಳ್ಳ ಪತ್ರಗಳನ್ನು ನೀಡುವವರೆಗೂ ನಾನು ಯಾವುದೇ ನಿರ್ಧಾರ ತೆಗೆದುಕೊಳ್ಳುವುದಿಲ್ಲ ಎಂದು ತಮಿಳು ನಾಡು ರಾಜ್ಯಪಾಲ ರಾಜೇಂದ್ರ ವಿಶ್ವನಾಥ ಅರಳೇಕರ್ ಕಡ್ಡಿ ಮುರಿದಂತೆ ಹೇಳಿದ್ದಾರೆ. ಹೀಗಾಗಿ ಟಿವಿಕೆ ಪಕ್ಷದ ಮುಖಂಡ ವಿಜಯ್ ಜೋಸೆಫ್ ಅವರ ಸರ್ಕಾರ ರಚನೆಗೆ ಎದುರಾಗಿರುವ ವಿಘ್ನಗಳು ಇನ್ನೂ 2–3 ದಿನ ಮುಂದುವರೆಯುವ ಸಾಧ್ಯತೆ ಇದೆ.**



ಶಾಸಕರ ಬೆಂಬಲದ ಬಗ್ಗೆ ಸಂಪೂರ್ಣ ಮನವರಿಕೆಯಾಗದ ಹೊರತು ಪ್ರಮಾಣ ವಚನಕ್ಕೆ ಅವಕಾಶ ನೀಡಲಾಗದು ಎಂದು ರಾಜ್ಯಪಾಲರು ಸೂಚಿಸಿರುವುದರಿಂದ ವಿಜಯ್ ಅವರ ಪದಗ್ರಹಣ ಸಮಾರಂಭ ವಿಳಂಬವಾಗುತ್ತಿದೆ.ಮೊದಲು ಪ್ರಮಾಣವಚನ ಸ್ವೀಕರಿಸಿ ನಂತರ ವಿಧಾನಸಭೆಯಲ್ಲಿ ಬಹುಮತ ಸಾಬೀತುಪಡಿಸುವುದಾಗಿ ಹೇಳಿದ್ದರು. ಆದರೆ ವಿಜಯ್ ಅವರ ವಾದ ಒಪ್ಪದ ರಾಜ್ಯಪಾಲರು 118 ಶಾಸಕರ ಸಹಿಯೊಂದಿಗೆ ಬನ್ನಿ ಎಂದು ಹೇಳಿದ್ದಾರೆ. ಬುಧವಾರವಷ್ಟೇ ರಾಜ್ಯಪಾಲ ಅರಳೇಕರ್‌ರವರನ್ನು ಭೇಟಿ ಮಾಡಿದ್ದ ವೇಳೆ 112 ಶಾಸಕರ ಬೆಂಬಲದ ಪತ್ರವನ್ನು ನೀಡಿದ್ದರೂ ಸರ್ಕಾರ ರಚನೆಗೆ ರಾಜ್ಯಪಾಲರು ಆಹ್ವಾನ ಕೊಟ್ಟಿರಲಿಲ್ಲ. ಇದರ ಬೆನ್ನಲ್ಲೇ ಪುನಃ ಇಂದು ವಿಜಯ್ ಲೋಕಭವನದಲ್ಲಿ ಮತ್ತೆ ಭೇಟಿಯಾಗಿ ಮಾತುಕತೆ ನಡೆಸಿದರು. ಲೋಕಭವನಕ್ಕೆ ಬರುವಂತೆ ಖುದ್ದು ರಾಜ್ಯಪಾಲರೇ ವಿಜಯ್‌ಗೆ ಆಹ್ವಾನ ಕೊಟ್ಟಿದ್ದರು. ಸರಳ ಬಹುಮತಕ್ಕೆ ಸರ್ಕಾರ ರಚಿಸಲು 118 ಶಾಸಕರ ಅಗತ್ಯವಿದೆ. ನೀವು 112 ಶಾಸಕರ ಬೆಂಬಲದ ಪತ್ರ ನೀಡಿದ್ದೀರಿ. ನಾಳೆ ಸದನದಲ್ಲಿ ನೀವು ಯಾವ ಶಾಸಕರ ಬೆಂಬಲ ಪಡೆದು ಬಹುಮತ ಸಾಬೀತುಪಡಿಸುತ್ತೀರಿ ಎಂದು ಕಾರ್ಯಾಂಗದ ಮುಖ್ಯಸ್ಥರು ಟಿವಿಕೆ ಮುಖಂಡರಿಗೆ ಪ್ರಶ್ನೆ ಮಾಡಿದ್ದಾರೆ. 118 ಶಾಸಕರ ಬೆಂಬಲದ ಪತ್ರವಿದ್ದರೆ ಸರ್ಕಾರ ರಚಿಸಲು ಆಹ್ವಾನ ಕೊಡುತ್ತೇನೆ. ನನ್ನ ನಿರ್ಧಾರದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ರಾಜ್ಯಪಾಲರು ಕೆಲವು ಕಾನೂನಿನ ತೊಡಕುಗಳನ್ನು ಮನವರಿಕೆ ಮಾಡಿಕೊಟ್ಟರು. ನಾನು ಸರ್ಕಾರ ರಚನೆಗೆ ಅಡ್ಡಿಪಡಿಸಿಲ್ಲ. ನೀವು ಕೇವಲ 112 ಶಾಸಕರ ಸಹಿಯುಳ್ಳ ಪತ್ರಗಳನ್ನು ನೀಡಿದ್ದೀರಿ. ನಿಮಗೆ ಬಹುಮತದ ಕೊರತೆ ಇರುವುದರಿಂದ ಸರ್ಕಾರ ರಚನೆಗೆ ಅವಕಾಶ ನೀಡಲು ಕಾನೂನಿನ ತೊಡಕು ಎದುರಾಗುತ್ತದೆ. ಈ ಹಿಂದೆ ಕರ್ನಾಟಕದಲ್ಲಿ ಅಂದರೆ 2018 ರಲ್ಲಿ ಯಾವುದೇ ಪಕ್ಷಕ್ಕೂ ಬಹುಮತ ಬಾರದಿದ್ದಾಗ ಅತೀ ದೊಡ್ಡ ಪಕ್ಷವಾಗಿ ಹೊರಹೊಮಿದ್ದ ಬಿಜೆಪಿ ಅಂದು ಬಿ.ಎಸ್.ಯಡಿಯೂರಪ್ಪ ನೇತೃತ್ವದಲ್ಲಿ ಸರ್ಕಾರ ರಚನೆಗೆ ರಾಜ್ಯಪಾಲರು ಆಹ್ವಾನ ನೀಡಿ ಸದನದಲ್ಲಿ ಬಹುಮತ ಸಾಬೀತುಪಡಿಸಲು 2 ವಾರಗಳ ಕಾಲ ಅವಕಾಶ ಕೊಟ್ಟಿದ್ದರು. ಆದರೆ ಸುಪ್ರೀಂಕೋರ್ಟ್‌ನಲ್ಲಿ ಇದನ್ನು ಪ್ರಶ್ನೆ ಮಾಡಿದ್ದರಿಂದ ಸದನದಲ್ಲಿ 24 ಗಂಟೆಯೊಳಗೆ ಬಹುಮತ ಸಾಬೀತುಪಡಿಸುವಂತೆ ಯಡಿಯೂರಪ್ಪ ಅವರಿಗೆ ಸೂಚನೆ ಕೊಟ್ಟಿತ್ತು. ಇದು ತಮಿಳುನಾಡಿನಲ್ಲಿ ಪುನರಾವರ್ತನೆಯಾಗಬಾರದು ಎಂದರೆ ನೀವು 118 ಶಾಸಕರ ಬೆಂಬಲದ ಪತ್ರವನ್ನು ನೀಡಿ ಎಂದು ರಾಜ್ಯಪಾಲರು ಟಿವಿಕೆ ಮುಖ್ಯಸ್ಥರಿಗೆ ಸೂಚಿಸಿರುವುದಾಗಿ ಮೂಲಗಳು ತಿಳಿಸಿವೆ. ರಾಜ್ಯಪಾಲರ ಕಠಿಣ ನಿಲುವು ಮತ್ತು ಪದಗ್ರಹಣ ವಿಳಂಬ ಸಂಖ್ಯೆಗಳ ಲೆಕ್ಕಾಚಾರದಲ್ಲಿ ಸಣ್ಣ ವ್ಯತ್ಯಾಸವಿದ್ದರೂ, ವಿಜಯ್ ಅವರು ತಾವೇ ಅತಿದೊಡ್ಡ ಪಕ್ಷದ ನಾಯಕನಾಗಿರುವುದರಿಂದ ಸರ್ಕಾರ ರಚಿಸಲು ಆಹ್ವಾನಿಸಬೇಕು ಎಂದು ಪಟ್ಟು ಹಿಡಿದಿದ್ದಾರೆ. ಭಾರತೀಯ ಕಮ್ಯುನಿಸ್ಟ್ ಪಕ್ಷ ಕೂಡ ವಿಜಯ್ ಸರ್ಕಾರಕ್ಕೆ ಬೆಂಬಲ ನೀಡಲು ಮುಂದಾಗಿದ್ದು, ಇದು ರಾಜಕೀಯ ವಲಯದಲ್ಲಿ ಸಂಚಲನ ಮೂಡಿಸಿದೆ. ಈ ಹೊಸ ಬೆಂಬಲದೊಂದಿಗೆ ವಿಜಯ್ ಪಾಳಯದ ಬಲ ಮತ್ತಷ್ಟು ಹೆಚ್ಚಿದ್ದು, ಬಹುಮತದ ಗಡಿಯನ್ನು ತಲುಪಲು ಕೇವಲ ಕೆಲವೇ ಸ್ಥಾನಗಳ ಅವಶ್ಯಕತೆ ಇದೆ.

# ಶಿವರಾಜ ನಾಯಕ ಗುಂಜಳ್ಳಿಯಿಂದ ತಾಲೂಕಿಗೆ 2ನೇ ರ್‍ಯಾಂಕ್ ಪಡೆದ ಶಾಂತಕುಮಾರಿಗೆ ರೂ.1 ಲಕ್ಷ ನೆರವು

ನೈಜ್ಯ ದೆಸೆ ನ್ಯೂಸ್

**ತಾಲೂಕಿನ ಪ್ರತಿಭಾವಂತ ವಿದ್ಯಾರ್ಥಿನಿ ಶಾಂತಕುಮಾರಿ ಬಸವರಾಜ ಅವರು ಎಸ್‌–ಎಸ್‌ಎಲ್.ಸಿ ಪರೀಕ್ಷೆಯಲ್ಲಿ 618 ಅಂಕಗಳನ್ನು ಪಡೆದು ಶೇ.98.88 ಫಲಿತಾಂಶ ಪಡೆದು, ಸಿಂಧನೂರು ತಾಲೂಕಿಗೆ 2ನೇ ರ್‍ಯಾಂಕ್ ನಲ್ಲಿ ತೇರ್ಗಡೆಯಾಗಿ ಅಪೂರ್ವ ಸಾಧನೆ ಮಾಡಿದ್ದಾರೆ. ವಿದ್ಯಾರ್ಥಿನಿಯ ಸಾಧನೆಯನ್ನು ಮೆಚ್ಚಿ ಸಮಾಜಮುಖಿ ನಾಯಕರಾದ ಶಿವರಾಜ ಪಾಟೀಲ ಗುಂಜಳ್ಳಿ ಅವರು ಶಾಂತಕುಮಾರಿಯನ್ನು ಸನ್ಮಾನಿಸಿ, ಮುಂದಿನ ಹೆಚ್ಚಿನ ವಿದ್ಯಾಭ್ಯಾಸಕ್ಕೆ 1 ಲಕ್ಷ ರೂಪಾಯಿ ಸಹಾಯ ಮಾಡು ವುದಾಗಿ ಘೋಷಿಸಿ ಮಾನವೀಯತೆ ಮೆರೆದಿದ್ದಾರೆ.**

ಸಾಧನೆ ಮೂಲಕ ತಮ್ಮ ಕುಟುಂಬಕ್ಕೆ ಮಾತ್ರವಲ್ಲದೆ ಊರು ಹಾಗೂ ತಾಲೂಕಿಗೂ ಕೀರ್ತಿ ತಂದಿರುವ ವಿದ್ಯಾರ್ಥಿನಿ ಶಾಂತಕುಮಾರಿಗೆ ವಿವಿಧ ವಲಯಗಳಿಂದ ಅಭಿನಂದನೆಗಳ



ಮಹಾಪೂರವೇ ಹರಿದು ಬರುತ್ತಿದೆ. ಅವರ ಈ ನಡೆಗೆ ಸಾರ್ವಜನಿಕರಲ್ಲಿ ಮೆಚ್ಚುಗೆಗೆ ಪಾತ್ರವಾಗಿದೆ. ಶಾಂತಕುಮಾರಿ ಬಸವರಾಜ ಅವರ ಪರಿಶ್ರಮ, ಶಿಸ್ತು, ಸಂಯಮ ಮತ್ತು ಆತ್ಮವಿಶ್ವಾಸವು ಇತರೆ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದ್ದು, ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೂ ಉತ್ತಮ ಅವಕಾಶ ದೊರೆತರೆ, ದೊಡ್ಡ ಸಾಧನೆ ಸಾಧ್ಯ ಎಂಬುದನ್ನು ಸಾಬೀತುಪಡಿಸಿದೆ.

ಕುಟುಂಬದವರು ಹಾಗೂ ಗ್ರಾಮಸ್ಥರು ವಿದ್ಯಾರ್ಥಿನಿಯ ಸಾಧನೆಗೆ ಸಂತಸ ವ್ಯಕ್ತಪಡಿಸಿದ್ದು, ಇನ್ನೂ 'ಉನ್ನತ ಶಿಕ್ಷಣ ಪಡೆದು ಸಮಾಜ–ಕ್ಕೆ ಮಾದರಿಯಾಗಲಿ' ಎಂದು ಹಾರೈಸಿದ್ದಾರೆ. ಪ್ರತಿಭೆಗೆ ಪ್ರೋತ್ಸಾಹ ವಿದ್ಯಾರ್ಥಿನಿಯ ಸಾಧನೆಗೆ ಕೈಹಿಡಿದ ಸಮಾಜ ಸೇವಕ: ಎಸ್‌ಎಸ್‌–ಎಲ್.ಸಿ ಪರೀಕ್ಷೆಯಲ್ಲಿ 618 ಅಂಕಗಳ ಸಾಧನೆ ಶೇ.98.88 ಫಲಿತಾಂಶದೊದಿಗೆ ತಾಲೂಕಿಗೆ 2ನೇ ರ್‍ಯಾಂಕ್ ಗ್ರಾಮ ಹಾಗೂ ಕುಟುಂಬದ ಗೌರವ ಹೆಚ್ಚಿಸಿದ ವಿದ್ಯಾರ್ಥಿನಿ ಪ್ರತಿಭೆಯನ್ನು ಗುರುತಿಸಿ ಸನ್ಮಾನಿಸಿದ ಶಿವರಾಜ ಪಾಟೀಲ ಗುಂಜಳ್ಳಿ ಮುಂದಿನ ಶಿಕ್ಷಣಕ್ಕಾಗಿ 1 ಲಕ್ಷ ಸಹಾಯ ಘೋಷಣೆ ಮಾಡಿದ್ದು, ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಪ್ರೇರಣೆಯಾದ ಸಾಧನೆ ಸಾರ್ವಜನಿಕರಿಂದ ಅಭಿನಂದನೆಗಳ ಮಹಾಪೂರವೇ ಹರಿದು ಬಂತು.

ಶಿಕ್ಷಣಕ್ಕೆ ಪ್ರೋತ್ಸಾಹವೇ ಸಮಾಜದ ಅಭಿವೃದ್ಧಿಗೆ ದಾರಿ' ಎಂಬ ಸಂದೇಶ ಸಾರಿದ ಎಸ್.ಎಸ್.ಎಲ್.ಸಿಯಲ್ಲಿ ತಾಲೂಕಿಗೆ 2ನೇ ರ್‍ಯಾಂಕ್ ಪಡೆದು, ನಮ್ಮ ಊರಿನ ಕೀರ್ತಿಯನ್ನು ಹೆಚ್ಚಿಸಿದ ಶಾಂತಕುಮಾರಿ ಬಸವರಾಜ ಅವ–ರಿಗೆ ಹೃತ್ಪೂರ್ವಕ ಅಭಿನಂದನೆಗಳು. ಅವರ ಪ್ರತಿಭೆಯನ್ನು ಗುರುತಿಸಿ ಸನ್ಮಾನಿಸಿ,1 ಲಕ್ಷ ಸಹಾಯ ಘೋಷಿಸಿದ ಶಿವರಾಜ ಪಾಟೀಲ ಗುಂಜಳ್ಳಿ ಅವರಿಗೆ ಕುಟುಂಬದ ಪರವಾಗಿ ಹಾಗೂ ವೈಯಕ್ತಿಕವಾಗಿ ಹೃತ್ಪೂರ್ವಕ ಧನ್ಯವಾದಗಳನ್ನು ತಿಳಿಸುತ್ತೇನೆ ಎಂದು ವಿದ್ಯಾರ್ಥಿನಿ ಶಾಂತಕುಮಾರಿ ಹೇಳಿದರು.

# ಮಟ್ಟೂರು ಗ್ರಾಮದಲ್ಲಿ ಹೊಸ ಶಾಸನ ಶೋಧ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ತಾಲ್ಲೂಕಿನ ಮಟ್ಟೂರು ಗ್ರಾಮದಲ್ಲಿ ರಾಮಲಿಂಗಶ್ವರ, ಬಸವೇಶ್ವರ,ಹನುಮಂತ ಹಾಗೂ ಸುಂಕಲಮ್ಮ,ಯಲ್ಲಮ್ಮ,ಗಣೇಶ,ದಾವಲ್ ಮಲಿಕ್,ಹೀಗೆ ಅನೇಕ ಶಕ್ತಿ ದೇವತೆಗಳ ದೇವಸ್ಥಾನಗಳು, ಹಾಗೂ ವೀರಗಲ್ಲುಗಳು ಇವೆ.**

ಇದೆ ಗ್ರಾಮದ ಹನುಮಂತ ದೇವಾಲಯದ ಮುಂದೆ ಪಶ್ಚಿಮ ದಿಕ್ಕಿನಲ್ಲಿ ಇರುವ ಕಲ್ಯಾಣ ಚಾಲುಕ್ಯರ ಅರಸ ಒಂದನೆಯ ಸೋಮೇಶ್ವರನ ಕ್ರಿ.ಶ 1050 ರ ಶಾಸನವನ್ನು ಡಾ.ಚನ್ನಬಸಪ್ಪ ಮಲ್ಕಂದಿನ್ನಿ ಯವರು ಶೋಧಿಸಿ ಪ್ರಕಟಿಸಿದ್ದಾರೆ. ಪ್ರಸ್ತುತ ಮಹಮ್ಮದ್ ರಫಿ ಲಿಂಗಸುಗೂರು ರವರ



ನೆರವಿನಿಂದ ಮತ್ತೊಂದು ಶಾಸನವನ್ನು ಪತ್ತೆ ಮಾಡಿದ್ದಾರೆ.

ಈ ಶಾಸನವು ಗ್ರಾಮದ ಉತ್ತರ ದಿಕ್ಕಿಗೆ ನಾಲ್ಕು ಕಿಲೋಮೀಟರ್ ದೂರದ ಪಂಪಣ್ಣ ಜಾವುರೂರವರ ಹೊಲದ ಸರ್ವೆ ನಂಬರ್ 143/3 ರಲ್ಲಿ ಪತ್ತೆಯಾಗಿದೆ. ಇದು ಕಣ ಶಿಲೆಯಲ್ಲಿದ್ದು ಕಿ.ಶ್ರ.13 ನೇ ಶತಮಾನಕ್ಕೆ ಸೇರುತ್ತದೆ. ಇದರ ಎತ್ತರ ಮೂರುವರೆ ಅಡಿ, ಅಗಲ ಎರಡೂವರೆ ಅಡಿ ಇದೆ.

ಈ ಶಾಸನದಲ್ಲಿ ಒಟ್ಟು ಐದು ಸಾಲಗಳಿದ್ದು ಕನ್ನಡ ಭಾಷೆ ಕನ್ನಡ ಲಿಪಿಯಲ್ಲಿದೆ. ಈ ಶಾಸನದ ಮೇಲ್ಭಾಗದಲ್ಲಿ ಸೂರ್ಯ ಮೂರು ಅಕ್ಷರಗಳು (ನಕ್ಷತ್ರ) ಚಂದ್ರರ ಶಿಲ್ಪಗಳಿವೆ.ಕೆಳ ಭಾಗದಲ್ಲಿ ನಾಲ್ಕು ಸಾಲುಗಳಿಂದ ರಚಿತ ಗೊಂಡಿದೆ.ಸೇವುಣ ಅರಸ ಇಮ್ಮಡಿ ಸಿಂಘಣ (ಕ್ರಿ.ಶ. 1199– 1247 ) ನ ಕಾಲದಲ್ಲಿ ದೇವಗಿರಿಯಿಂದ ರಾಜ್ಯಭಾರ ಮಾಡುತ್ತಿರುವ ಕಾಲದಲ್ಲಿ ಮುದಗಲ್ ಭಾಗದ ಪ್ರದೇಶವನ್ನು ಈತನ ಮಹಾ ಪ್ರಧಾನ ದಂಡನಾಯಕ ಪರಸಯ್ಯ ಎಂಬುವವರು ನೋಡಿ ಕೊಳ್ಳುತ್ತಿದ್ದರು.

ಈ ಪರಸಯ್ಯನು ತನ್ನ ಕೆಳಗೆ ಸೇವೆ ಸಲ್ಲಿಸುತ್ತಿದ್ದ ಮಾಳಯ್ಯ ಎಂಬಾತನಿಗೆ ವೃತ್ತಿ ಮಾನ್ಯವಾಗಿ ಗೇಣ ಕೋಲಿನಿಂದ ಆರು ಮತ್ತರು ಭೂಮಿ ಅಳೆದು ದತ್ತಿ ನೀಡಿದ ವಿಷಯವಿದೆ.ಎಂದು ಇತಿಹಾಸದ ಶಾಸನ ಸಂಶೋಧಕರಾದ ಡಾ.ಚನ್ನಬಸಪ್ಪ ಮಲ್ಕಂದಿನ್ನಿ ಯವರು ಪ್ರಕಟನೆಯ ಮೂಲಕ ತಿಳಿಸಿದರು. ಈ ಕಾರ್ಯದಲ್ಲಿ ಸಹಕರಿಸಿದ ಶಿವಲಿಂಗಯ್ಯ ಹಿರೇಮಠ ಬುದ್ದಿನ್ನಿ,ಸೇರಿದಂತೆ ಊರಿನ ಜನರಿಗೆ ಧನ್ಯವಾದ ಗಳನ್ನು ತಿಳಿಸಿದರು.

# ಜಿಲ್ಲಾ ಆರೋಗ್ಯ ಇಲಾಖೆ ವಿವಿಧ ಹುದ್ದೆಗೆ ಅರ್ಜಿ ಆಹ್ವಾನ



ನೈಜ್ಯ ದೆಸೆ ನ್ಯೂಸ್

**ರಾಯಚೂರು: ಇಲ್ಲಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು, ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ 2025–26 ನೇ ಸಾಲಿಗೆ ಮಂಜೂರಾಗಿ ಖಾಲಿ ಇರುವ ಹುದ್ದೆಗಳು ತಾಲೂಕಾ ಕಾರ್ಯಕ್ರಮ ವ್ಯವಸ್ಥಾಪಕರು–01 ಹುದ್ದೆ, ಪಂಚಕರ್ಮ ಥೆರಪಿಸ್ಟ್–01 ಹುದ್ದೆ ಆಯುಷ್ ವಿಭಾಗ, ಎಪಿಡಾಮೊಲಿಸ್ಟ್–01 ಹುದ್ದೆ, ಕಮ್ಯೂನಿಟಿ ನರ್ಸ್ 01 ಹುದ್ದೆ ಡಿ.ಎಮ್.ಹೆಚ್.ಪಿ.**

ಕಾರ್ಯಕ್ರಮ, ಆಪ್ತ ಸಮಾಲೋಚಕರು?01 ಹುದ್ದೆ ಡಿ.ಎಮ್.ಹೆಚ್.ಪಿ. ಕಾರ್ಯಕ್ರಮ, ಆಪ್ತ ಸಮಾಲೋಚಕರು–01 ಹುದ್ದೆ ಎನ್.ಸಿ.ಡಿ. ವಿಭಾಗ, ಲ್ಯಾಬ್ ಟೆಕ್ನೀಷಿಯನ್?01 ಎನ್.ಟಿ.ಇ.ಪಿ. ಕಾರ್ಯಕ್ರಮ, ಆಡಿಯೋಲಾಜಿಸ್ಟ್–01 ಹುದ್ದೆ, ಆಡಿಯೋಮೆಟ್ರೀಕ್ ಅಸಿಸ್ಟೆಂಟ್–01, ಇನ್ಸ್ಟ್ರಕ್ಟರ್ ಫಾರ್ ಹಿಯರಿಂಗ್ ಇಂಪ್ಯಾರಿಡ್ ಚಿಲ್ಡ್ರನ್–01, ಜಿಲ್ಲಾ ಡಿ.ಇ.ಐ.ಸಿ. ವ್ಯವಸ್ಥಾಪಕರು–01ಹುದ್ದೆ, ಒಟ್ಟು 11 ಹುದ್ದೆ ಭರ್ತಿ ಮಾಡಿಕೊಳ್ಳಲು ರಾಷ್ಟ್ರೀಯ ಆರೋಗ್ಯ ಅಭಿಯಾನದ ಮಾರ್ಗಸೂಚಿ ಹಾಗೂ ಷರತ್ತು ಮತ್ತು ನಿಬಂಧನೆಗಳಿಗೆ ಅನುಸಾರ ಗುತ್ತಿಗೆ ಆಧಾರದ ಮೇಲೆ ಮೇರಿಟ್ ಕಮ್ ರೋಷ್ಟರ್ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ದಿನಾಂಕ: 11.05.2026 ದಿಂದ 18.05.2026 ರ ವರೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಅರ್ಜಿಗಳನ್ನು ಸಲ್ಲಿಸಬಹುದು. ಸದರಿ ಹುದ್ದೆಗಳಿಗೆ ನೇರ ಸಂದರ್ಶನದ ದಿನಾಂಕವನ್ನು ತಿಳಿಸಲಾಗುವುದೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ದೈವ ದೀನರಾದ ತಾಯಿಯ ಸವಿನೆನಪಿಗಾಗಿ “ದಾಸರಿ ಅನ್ನಪೂರ್ಣ ಗಾರ್ಡನ್” ನಿರ್ಮಿಸಿದ ಮಕ್ಕಳು

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ತಾಲೂಕಿನ ತುರ್ವಿಹಾಳದ ಹತ್ತಿರವಿರುವ ಶ್ರೀನಿವಾಸ ಕ್ಯಾಂಪಿನಲ್ಲಿ ತಾಯಿಯ ಮೇಲಿನ ಅಪಾರ ಪ್ರೀತಿ, ಗೌರವ ಮತ್ತು ಸ್ಮರಣೆಯನ್ನು ಶಾಶ್ವತವಾಗಿಸಲು ದಾಸರಿ ಕುಟುಂಬಸ್ಥರು ಕೈಗೊಂಡಿರುವ ಈ ಮಹತ್ವದ ಕಾರ್ಯ ಸಾರ್ವಜನಿಕರ ಮನಸ್ಸು ಮುಟ್ಟುವಂತಾಗಿದೆ.**

ತಾಯಿಯ ಸವಿನೆನಪಿಗಾಗಿ ಸುಂದರವಾದ “ದಾಸರಿ ಅನ್ನಪೂರ್ಣ ಗಾರ್ಡನ್” ನಿರ್ಮಿಸಿರುವ ದಾಸರಿ ರಘುನಾಥ, ರಮ್ಯಾಲತಾ ದಾಸರಿ ಹಾಗೂ ಅಜಯನಾಥ ದಾಸರಿ ಅವರ ಈ ಕಾರ್ಯಕ್ಕೆ ಎಲ್ಲೆಡೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಗುತ್ತಿದೆ. ತಾಯಿ ಅನ್ನಪೂರ್ಣ ಅವರ ಜೀವನ ಮೌಲ್ಯಗಳು,



ಕುಟುಂಬದ ಮೇಲಿನ ಪ್ರೀತಿ ಹಾಗೂ ಸಮಾಜಮುಖಿ ಚಿಂತನೆಗಳನ್ನು ಸದಾ ನೆನಪಿನಲ್ಲಿ ಉಳಿಸಿಕೊಳ್ಳುವ ಉದ್ದೇಶದಿಂದ ಗಾರ್ಡನ್ ನಿರ್ಮಿಸಲಾಗಿದೆ ಎಂದು ಕುಟುಂಬದವರು ತಿಳಿಸಿದ್ದಾರೆ. ಇದು ಕೇವಲ ಒಂದು ಗಾರ್ಡನ್ ನಿರ್ಮಾಣವಲ್ಲ ತಾಯಿಯ ಪ್ರೀತಿ, ತ್ಯಾಗ, ಮತ್ತು ಆಶೀರ್ವಾದವನ್ನು ಮುಂದಿನ ಪೀಳಿಗೆಗೂ ಪರಿಚಯಿಸುವ ಭಾವನಾತ್ಮಕ ಸಂಕೇತವಾಗಿದೆ.



ಕುಟುಂಬದ ಸದಸ್ಯರ ಈ ಮಾನವೀಯ ಹಾಗೂ ಸಂಸ್ಕಾರಪೂರ್ಣ ಕಾರ್ಯವು ಜನಮನ ಗೆದ್ದಿದೆ. ಸಾಮಾಜಿಕ ವಲಯದಲ್ಲಿ 'ತಾಯಿಗೆ ನೀಡಿದ ಅತ್ಯಂತ ಸುಂದರ ಗೌರವ' ಎಂದು ಸಾರ್ವಜನಿಕರು ಪ್ರಶಂಸಿಸುತ್ತಿದ್ದು, ಇಂತಹ ಕಾರ್ಯಗಳು ಇಂದಿನ ಯುವ ಪೀಳಿಗೆಗೆ ಪ್ರೇರಣೆಯಾಗಬೇಕು ಎಂಬ ಅಭಿಪ್ರಾಯ ವ್ಯಕ್ತವಾಗುತ್ತಿದೆ.

# ಜಿಲ್ಲಾಡಳಿತದಿಂದ ಮೇ.10ರಂದು ಹೇಮರಡ್ಡಿ ಮಲ್ಲಮ್ಮ ಜಯಂತಿ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಇಲ್ಲಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಹೇಮರಡ್ಡಿ ಮಲ್ಲಮ್ಮ ಜಯಂತಿ ಕಾರ್ಯಕ್ರಮವು ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಮೇ.10ರ ಬೆಳಿಗ್ಗೆ 10:30ಕ್ಕೆ ಹಮ್ಮಿಕೊಳ್ಳಲಾಗಿದೆ.**

ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಉದ್ಘಾಟನೆ ನೆರವೇರಿಸುವರು. ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಅವರು ಘನ ಉಪಸ್ಥಿತಿ ವಹಿಸುವರು. ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್ ಅವರು ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷರು ಆಗಿರುವ ಬೀಳಗಿ ಕ್ಷೇತ್ರದ ಶಾಸಕರಾದ ಜೆ.ಟಿ.ಪಾಟೀಲ್, ರಾಯಚೂರು ಲೋಕಸಭಾ ಸದಸ್ಯರಾದ



ಜಿ.ಕುಮಾರ ನಾಯಕ, ಕೊಪ್ಪಳ ಲೋಕಸಭಾ ಸಂಸದರಾದ ಕೆ.ರಾಜಶೇಖರ ಹಿಟ್ನಾಳ, ಮಾನವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ,

ಲಿಂಗಸಗೂರು ಕ್ಷೇತ್ರದ ಶಾಸಕರಾದ ಮಾನಪ್ಪ ಡಿ.ವಜ್ಜಲ್, ದೇವದುರ್ಗ ಕ್ಷೇತ್ರದ ಶಾಸಕರಾದ ಕರೆಮ್ಮ ಜಿ.ನಾಯಕ, ವಿಧಾನ ಪರಿಷತ್ ಶಾಸಕರಾದ ಶಶೀಲ್ ಜಿ.ನಮೋಷಿ, ವಿಧಾನ ಪರಿಷತ್ ಶಾಸಕರಾದ ಚಂದ್ರಶೇಖರ್ ಬಿ.ಪಾಟೀಲ್, ವಿಧಾನ ಪರಿಷತ್ ಶಾಸಕರಾದ ಶರಣಗೌಡ ಪಾಟೀಲ ಬಯ್ಯಾಪುರ, ಎ.ವಸಂತಕುಮಾರ, ಬಸನಗೌಡ ಬಾದರ್ಲಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಗೌಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಾಜಶೇಖರ ರಾಮಸ್ವಾಮಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ, ರಾಯಚೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ್, ಆರ್ಥಿಕ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ರಿತೇಶಕುಮಾರ ಸಿಂಗ್,

ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಮ್, ಸಿದ್ಧಾರ್ಥ–ರ್ಬ ಬುದ್ಧ ವಿಹಾರ ಸಮಿತಿಯ ಅಧ್ಯಕ್ಷ ಆರ್. ರವಿಕುಮಾರ ರಾಂಪೂರು, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾ–ರಿಗಳಾದ ಅರುಣಾಂಗ್ಸು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಬಾಗಿಯಾಗಲಿದ್ದಾರೆ. ರಾಯಚೂರು ತಾಲೂಕಿನ ಶಕ್ತಿನಗರದ ಕೆಪಿಸಿ–ಎಲ್, ಪಂ.ಜಾತಿ/ ಪಂ.ವರ್ಗದ ನೌಕರರ ಸಂಘದ ಅಧ್ಯಕ್ಷ ಗೌತಮ ಕಟ್ಟಿಮನಿ ಅವರು ಭಗವಾನ್ ಬುದ್ಧರ ಜಯಂತಿ ಕುರಿತು ಉಪನ್ಯಾಸ ನೀಡಲಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಉತ್ತರಾದೇವಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಐಟಿಐ ಫಿಟ್ಟರ್

ಐಟಿಐ ಫಿಟ್ಟರ್ (ITI Fitter) ಒಂದು 2 ವರ್ಷಗಳ (4 ಸೆಮಿಸ್ಟರ್) ತಾಂತ್ರಿಕ ವೃತ್ತಿಪರ ಕೋರ್ಸ್ ಆಗಿದ್ದು, ಯಂತ್ರೋಪಕರಣಗಳ ಜೋಡಣೆ, ನಿರ್ವಹಣೆ ಮತ್ತು ರಿಪೇರಿ ಬಗ್ಗೆ ತರಬೇತಿ ನೀಡುತ್ತದೆ. 10ನೇ ತರಗತಿ (ವಿಜ್ಞಾನ ಮತ್ತು ಗಣಿತದೊಂದಿಗೆ) ಉತ್ತೀರ್ಣರಾದವರು ಸೇರಬಹುದು. ಈ ಕೋರ್ಸ್ ಖಾಸಗಿ ಮತ್ತು ಸರ್ಕಾರಿ ಕ್ಷೇತ್ರಗಳಲ್ಲಿ (ರೈಲ್ವೆ, BHEL, SAIL) ಉದ್ಯೋಗಾವಕಾಶಗಳನ್ನು ಒದಗಿಸುತ್ತದೆ. ITI ಫಿಟ್ಟರ್ ಕೋರ್ಸ್ ವಿವರಗಳು:ಕೋರ್ಸ್ ಹೆಸರು: ಐಟಿಐ ಫಿಟ್ಟರ್ (ITI Fitter) ಅವಧಿ: 2 ವರ್ಷಗಳು (4 ಸೆಮಿಸ್ಟರ್‌ಗಳು)ವಿದ್ಯಾರ್ಹತೆ: 10ನೇ ತರಗತಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ವಿಜ್ಞಾನ ಮತ್ತು ಗಣಿತ ವಿಷಯಗಳೊಂದಿಗೆ ತೇರ್ಗಡೆ.ವಯೋಮಿತಿ: ಸಾಮಾನ್ಯವಾಗಿ 14 ರಿಂದ 40 ವರ್ಷಗಳು (ಸರಕಾರಿ ನಿಯಮಗಳಡಿ ವಿನಾಯಿತಿ ಇರಬಹುದು).ಪಠ್ಯಕ್ರಮ (Syllabus):ಮೂಲಭೂತ ಸುರಕ್ಷತಾ ಕ್ರಮಗಳು (Safety Measures).ಮೆಟಲ್ ವರ್ಕಿಂಗ್, ಫೈಲಿಂಗ್, ಡ್ರಿಲ್ಲಿಂಗ್, ಮತ್ತು ಗ್ರೈಂಡಿಂಗ್.ಲೇಥ್ (Lathe) ಯಂತ್ರದ ಕೆಲಸ.ಪೈಪ್ ಫಿಟ್ಟಿಂಗ್ ಮತ್ತು ಸ್ಟ್ರಕ್ಚರಲ್ ಫ್ಯಾಬ್ರಿಕೇಶನ್.ಅಳತೆ ಉಪಕರಣಗಳು (Measuring Instrument).ಉದ್ಯೋಗಾವಕಾಶಗಳು:ಉತ್ಪಾದನಾ ಕಾರ್ಖಾನೆಗಳು (Manufacturing Industries).ಪಬ್ಲಿಕ್ ಸೆಕ್ಟರ್ ಅಂಡರ್‌ಟೇಕಿಂಗ್ಸ್ (PSUs - BHEL, SAIL, HAL).ಭಾರತೀಯ ರೈಲ್ವೆ (Indian Railways).ಸ್ವಯಂ ಉದ್ಯೋಗ (ವರ್ಕ್‌ಶಾಪ್ ಸ್ಥಾಪನೆ).

## El Niño 2026" ಹಿನ್ನೆಲೆ ಜಲ ಭದ್ರತೆ ಹಾಗೂ ಬರ ನಿರ್ವಹಣೆಗೆ ಉನ್ನತ ಮಟ್ಟದ ಸಭೆ

ನೈಜ್ಯ ದೆಸೆ ನ್ಯೂಸ್





**ಬೆಂಗಳೂರು: ``El Niño 2026" ಪರಿಣಾಮದಿಂದ ರಾಜ್ಯದಲ್ಲಿ ಎದುರಾಗಬಹುದಾದ ಜಲ ಸಂಕಷ್ಟವನ್ನು ಸಮರ್ಥವಾಗಿ ಎದುರಿಸುವ ಹಾಗೂ ಜಲ ಭದ್ರತೆಯನ್ನು ಖಚಿತಪಡಿಸುವ ಉದ್ದೇಶದಿಂದ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಪರಿಷತ್ತಿನ ಸಭಾ ನಾಯಕ ಎನ್.ಎಸ್. ಬೋಸರಾಜು ಅವರ ಅಧ್ಯಕ್ಷತೆಯಲ್ಲಿ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯ ಉನ್ನತ ಮಟ್ಟದ ತಾಂತ್ರಿಕ ಸಮಾಲೋಚನಾ ಹಾಗೂ ಪರಿಶೀಲನಾ ಸಭೆ ಇಂದು ಬೆಂಗಳೂರು ದಕ್ಷಿಣ ವಿಭಾಗದ ಮುಖ್ಯ ಅಭಿಯಂತರರ ಕಚೇರಿಯಲ್ಲಿ ನಡೆಯಿತು.**

ಸಭೆಯಲ್ಲಿ ಭಾರತೀಯ ವಿಜ್ಞಾನ ಸಂಸ್ಥೆ (IISc) ವಿಜ್ಞಾನಿಗಳು, ಕರ್ನಾಟಕ ರಾಜ್ಯ ದೂರ ಸಂವೇದನಾ ಅನ್ವಯಿಕ ಕೇಂದ್ರ (KSRSAC), ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ಮೇಲ್ವಿಚಾರಣಾ ಕೇಂದ್ರ (KSNDMC), ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಹಾಗೂ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯ ಅಧಿಕಾರಿಗಳು ಭಾಗವಹಿಸಿ, ರಾಜ್ಯದಲ್ಲಿ ಲಭ್ಯವಿರುವ ನೀರಿನ ಸಮರ್ಪಕ ಸಂರಕ್ಷಣೆಗಾಗಿ ಅಂತರ್ಜಲ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಬೇಕೆಂದು ಸಲಹೆ ನೀಡಿದರು. ಇದರೊಂದಿಗೆ ಸಾರ್ವಜನಿಕರಲ್ಲಿ ಮಳೆ ನೀರು ಕೊಯ್ಲು (Rain Water Harvesting) ಪದ್ಧತಿಯನ್ನು ವ್ಯಾಪಕವಾಗಿ ಅಳವಡಿಸಿಕೊಳ್ಳಲು ಜಾಗೃತಿ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಅತ್ಯಾವಶ್ಯಕ ಎಂದು ತಜ್ಞರು ಅಭಿಪ್ರಾಯಪಟ್ಟರು.

ಸಭೆಯಲ್ಲಿ ಮಾತನಾಡಿದ ಎನ್. ಎಸ್. ಬೋಸರಾಜು ಅವರು, ``El Niño" ಪರಿಣಾಮವನ್ನು ಎದುರಿಸಲು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿರುವ ಕೆರೆಗಳು, ಪಿಕ್–ಅಪ್ ಡ್ಯಾಂಗಳು ಹಾಗೂ ಕಿಂಡಿ ಅಣೆಕಟ್ಟುಗಳಲ್ಲಿ ಸಂಗ್ರಹವಾಗಿರುವ ನೀರು ಸೋರಿಕೆಯಾಗದಂತೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕೆಂದು ಸೂಚಿಸಿದರು. ಮುಂದಿನ 4?5 ದಿನಗಳ ಒಳಗಾಗಿ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಕೆರೆಗಳು ಹಾಗೂ ಜಲ ಸಂರಕ್ಷಣಾ ರಚನೆಗಳಿಗೆ ಭೇಟಿ ನೀಡಿ ಪ್ರಸ್ತುತ ಸ್ಥಿತಿಗತಿಯ ಸಮಗ್ರ ವರದಿ ಸಲ್ಲಿಸುವಂತೆ ನಿರ್ದೇಶನ ನೀಡಿದರು.

ತಜ್ಞರ ಸಲಹೆಯಂತೆ ಇಲಾಖೆಯ ಅಧೀನದಲ್ಲಿರುವ ಎಲ್ಲಾ 18 ವಲಯಗಳ ಕಾರ್ಯಪಾಲಕ ಇಂಜಿನಿಯರ್‌ಗಳು ತಮ್ಮ ವ್ಯಾಪ್ತಿಯ ಕೆರೆಗಳು, ಅಣೆಕಟ್ಟುಗಳು ಮತ್ತು ಜಲಾಶಯಗಳ ನಿರ್ವಹಣೆಯ ಸಂಪೂರ್ಣ ಹೊಣೆ ಹೊತ್ತುಕೊಳ್ಳಬೇಕು. ಅಲ್ಪ ಪ್ರಮಾಣದ ನೀರಿನ ಸೋರಿಕೆಯೂ ಆಗದಂತೆ ತಕ್ಷಣ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಲಾಯಿತು. ರಾಜ್ಯದಲ್ಲಿ ಸಂಭವಿಸಬಹುದಾದ ಬರ ಪರಿಸ್ಥಿತಿಯನ್ನು ಮುಂಚಿತವಾಗಿಯೇ ನಿರ್ವಹಿಸುವ ದಿಸೆಯಲ್ಲಿ ಸರ್ಕಾರ ಸಮಗ್ರ ಯೋಜನೆ ರೂಪಿಸಿಕೊಂಡಿದ್ದು, ಜಲ ಸಂಪನ್ಮೂಲಗಳ ಪರಿಣಾಮಕಾರಿ ಬಳಕೆ ಹಾಗೂ ಸಂರಕ್ಷಣೆ ಮೂಲಕ ಜನರಿಗೆ ನೀರಿನ ಭದ್ರತೆ ಒದಗಿಸುವತ್ತ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಸಭೆಯಲ್ಲಿ ತಿಳಿಸಲಾಯಿತು.

## ವಾಣಿಜ್ಯ ಲಾಭದ ಕಾರಣ ಐಪಿಎಲ್ ಸ್ಥಳಾಂತರ: ಗೃಹ ಸಚಿವ ಪರಮೇಶ್ವರ್

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಬಿಜೆಪಿಯವರು ಎಷ್ಟು ಜನರ ಬೆನ್ನಿಗೆ ಚೂರಿ ಹಾಕಿದ್ದಾರೆ ಎಂಬುದನ್ನು ಹೇಳದೆ, ಜಾಣ ಕುರುಡರಂತೆ ವರ್ತಿಸಿ, ಕಾಂಗ್ರೆಸ್ ಬಗ್ಗೆ ಟೀಕೆ ಮಾಡಲಾಗುತ್ತದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಆರೋಪಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಮಿಳುನಾಡಿನಲ್ಲಿ ಜನಪರ ಸರ್ಕಾರ ರಚನೆಯಾಗಲು ಟಿವಿಕೆಗೆ ಬೆಂಬಲ ನೀಡುತ್ತಿದ್ದೇವೆ. ಚರಾಜಕೀಯ ಸಾಧ್ಯತೆಗಳ ಕಲೆ ಎಂದು ಹೇಳಿದರು.**



ಶೃಂಗೇರಿ ವಿಧಾನಸಭಾ ಕ್ಷೇತ್ರದ ಚುನಾವಣೆಯ ಫಲಿತಾಂಶದ ಬಗ್ಗೆ ಕಾಂಗ್ರೆಸ್ ಟಿ.ಡಿ.ರಾಜೇಗೌಡ ಅವರು ಚುನಾವಣಾ ಆಯೋಗಕ್ಕೆ ದೂರು ನೀಡುವುದು, ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸುವುದು ಸೇರಿದಂತೆ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳುತ್ತಾರೆ. ಹೀಗಾಗಲೇ ಮತಪತ್ರಗಳನ್ನು ತಿರುಚಲಾಗಿದೆ ಎಂದು ರಾಜೇಗೌಡ ಖಾಸಗಿ ದೂರು ನೀಡಿದ್ದಾರೆ. ಎಫ್‌ಐಆರ್ ದಾಖಲಾಗಿದೆ. ವಿಚಾರಣೆ ನಡೆದು ಅದು ಸಾಬೀತಾದರೆ, ಫಲಿತಾಂಶ ಮತ್ತೆ ಬೇರೆ ರೀತಿಯಾಗುತ್ತದೆ ಎಂದು ಹೇಳಿದರು. ಬೆಂಗಳೂರಿನಿಂದ ಐಪಿಎಲ್ ಪಂದ್ಯಾವಳಿ ಅಹಮದಾಬಾದ್‌ಗೆ ಸ್ಥಳಾಂತರಗೊಳ್ಳಲು ವಾಣಿಜ್ಯ ಲಾಭದ ಕಾರಣಗಳಿವೆ. ಭದ್ರತೆ ವಿಚಾರವಾಗಿ ಯಾವುದೇ ಆಕ್ಷೇಪಣೆಗಳಿಲ್ಲ. ಈವರೆಗೂ ನಡೆದಿರುವ 5 ಪಂದ್ಯಾವಳಿಗಳಿಗೆ ಭದ್ರತೆ ಸೇರಿದಂತೆ ಎಲ್ಲಾ ರೀತಿಯ ವ್ಯವಸ್ಥೆಗಳನ್ನು ಮಾಡಲಾಗಿದೆ. ಐಪಿಎಲ್, ಆರ್‌ಸಿಬಿ ಕರ್ನಾಟಕ ಕ್ರಿಕೆಟ್ ಸಂಸ್ಥೆ ಸೇರಿದಂತೆ ಯಾವುದೇ ಸಂಸ್ಥೆಗಳು ಭದ್ರತೆಗೆ ಸಂಬಂಧಪಟ್ಟಂತೆ ಆಕ್ಷೇಪಣೆ? ವ್ಯಕ್ತಪಡಿಸಿಲ್ಲ ಎಂದರು.ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ 33 ಸಾವಿರ ಆಸನ ವ್ಯವಸ್ಥೆಗಳಿವೆ. ಅದರಲ್ಲಿ ಅತೀ ಗಣ್ಯರು, ಪ್ರಾಯೋಜಕತ್ವದ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ಆಟಗಾರರ ಕುಟುಂಬ ಸೇರಿ ಸುಮಾರು 7 ರಿಂದ 8 ಸಾವಿರ ಟಿಕೆಟ್‌ಗಳನ್ನು ಉಚಿತವಾಗಿ ಕೊಡಬೇಕಾಗುತ್ತದೆ. 25 ಸಾವಿರ ಟಿಕೆಟ್‌ಗಳು ಉಳಿಯುತ್ತಿದ್ದು, ವಾಣಿಜ್ಯೋದ್ದೇಶದಿಂದ ಇದು ಲಾಭವಾಗುವುದಿಲ್ಲ. ಅಹಮದಾಬಾದ್ ಕ್ರೀಡಾಂಗಣದಲ್ಲಿ ಒಂದು ಲಕ್ಷ ಆಸನ ವ್ಯವಸ್ಥೆ ಇದೆ. ಅಲ್ಲಿ ಪಂದ್ಯಾವಳಿ ನಡೆದರೆ ಲಾಭದಾಯಕ ಎಂಬ ಕಾರಣಕ್ಕೆ ಸ್ಥಳಾಂತರ ಮಾಡುತ್ತಿರುವುದಾಗಿ ಅನಧಿಕೃತವಾಗಿ ತಿಳಿಸಲಾಗುತ್ತಿದೆ ಎಂದು ತಿಳಿಸಿದರು. ಈ ಹಿಂದಿನ ಸರಣಿಯಲ್ಲಿ ಗೆದ್ದ ತಂಡದ ತವರಿನಲ್ಲಿ ಮೊದಲ ಹಾಗೂ ಪ್ರಸ್ತುತ ಸರಣಿಯಲ್ಲಿ ಫೈನಲ್‌ಗೆ ಬಂದ ತಂಡಕ್ಕೆ ಸೇರಿದ ಊರಿನಲ್ಲಿ ಕೊನೆಯ ಪಂದ್ಯಾವಳಿ ಆಯೋಜಿಸುವುದು ಬಿಸಿಸಿಐನ ನಿಯಮಾವಳಿಯಲ್ಲಿದೆ. ಆದರೆ ಈ ಬಾರಿ ಅದನ್ನು ಲಾಭದ ಕಾರಣಕ್ಕಾಗಿ ಮಾರ್ಪಾಡು ಮಾಡಿಕೊಂಡಿದ್ದಾರೆ ಎಂದರು. ಡಿಜಿಪಿ ರಾಮಚಂದ್ರ ರಾವ್ ಅವರ ಅಮಾನತು ಹಿಂಪಡೆದಿರುವುದನ್ನ ಪರಮೇಶ್ವರ್ ಸಮರ್ಥಿಸಿಕೊಂಡರು. ಇಲ್ಲಿ ಸರಿ ತಪ್ಪುಗಳ ವಿಚಾರ ಪ್ರಮುಖ ಅಲ್ಲ. ರಾಮಚಂದ್ರ ರಾವ್ ಈ ತಿಂಗಳ ಕೊನೆಯಲ್ಲಿ ನಿವೃತ್ತರಾಗುತ್ತಿದ್ದಾರೆ. ಅವರಿಗೆ ಪಿಂಚಣಿ ಹಾಗೂ ಇತರ ಭತ್ಯೆಗಳು ಇತ್ಯರ್ಥವಾಗಬೇಕಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿರುವ ರಾಮಚಂದ್ರರಾವ್ ಮನವಿ ಮಾಡಿದ್ದರು. ತನಿಖೆಗೆ ತಾವು ಸಹಕರಿಸುತ್ತೇನೆ. ಅದರಲ್ಲಿ ಯಾವುದೇ ರೀತಿಯ ಅಭಿಪ್ರಾಯ ಬಂದರೂ ಅದನ್ನು ಒಪ್ಪಿಕೊಳ್ಳುವುದಾಗಿ ಭರವಸೆ ನೀಡಿದ್ದಾರೆ. ಹೀಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅನುಮತಿಯೊಂದಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಅಮಾನತ್ತನ್ನು ಹಿಂಪಡೆದಿದೆ ಎಂದು ತಿಳಿಸಿದರು. ಪಶ್ಚಿಮಬಂಗಾಳದಲ್ಲಿ ಮುಖ್ಯಮಂತ್ರಿ ಅಭ್ಯರ್ಥಿ ಸುವೇಂದು ಆಧಿಕಾರಿ ಆಪ್ತನನ್ನು ಗುಂಡಿಟ್ಟು ಹತ್ಯೆ ಮಾಡಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಚುನಾವಣೆಗಳಲ್ಲಿ ಈ ರೀತಿಯ ಘಟನೆಗಳು ಸಾಮಾನ್ಯ. ಆದರೆ ಇಂತಹ ದುಷ್ಕೃತ್ಯಗಳು ನಡೆಯಬಾರದು. ಚುನಾವಣಾ ಆಯೋಗ ಅಗತ್ಯ ಬಿಗಿಭದ್ರತೆ ಕೈಗೊಳ್ಳಬೇಕು ಎಂದರು.

## ಅಮೆರಿಕ–ಇರಾನ್ ಯುದ್ಧಾಂತ್ಯಕ್ಕೆ ಕಾಲ ಸನ್ನಿಹಿತ

ನೈಜ್ಯ ದೆಸೆ ನ್ಯೂಸ್



**ವಾಷಿಂಗ್ಟನ್: ಸಂಘರ್ಷ ಕೊನೆಗೊಳಿಸುವ ನಿಟ್ಟಿನಲ್ಲಿ ಅಮೆರಿಕ–ಇರಾನ್ ಮುಂದಾಗಿದ್ದು ಯುದ್ಧ ಅಂತ್ಯಗೊಳಿಸುವ ಕಾಲ ಸನ್ನಿಹಿತವಾಗಿದೆ ಎಂದು ಉನ್ನತ ಮೂಲಗಳು ತಿಳಿಸಿವೆ ಅಮೆರಿಕ– ಇರಾನ್ ನಡುವೆ ಒಪ್ಪಂದಕ್ಕೆ ಹತ್ತಿರವಾಗಬಹುದು ಎನ್ನುವ ವರದಿ ನಡುವೆಯೂ ಯುದ್ಧವನ್ನು ಕೊನೆಗೊಳಿಸುವ ಅಮೆರಿಕದ ಪ್ರಸ್ತಾಪವನ್ನು "ಇನ್ನೂ ಪರಿಗಣಿಸಲಾಗುತ್ತಿದೆ" ಎಂದು ಇರಾನ್ ಹೇಳಿದೆ.**

ಇರಾನ್ ಮುಂದಿಟ್ಟಿರುವ 14 ಅಂಶಗಳ ತಿಳುವಳಿಕೆ ಒಪ್ಪಂದಕ್ಕೆ ಅಮೆರಿಕ ಒಪ್ಪುವ ಸಾಧ್ಯತೆ ಇದೆ, ಈ ಬಗ್ಗೆ ಮತ್ತೊಮ್ಮೆ ಚರ್ಚೆ ನಡೆಸಿ ಅಂತಿಮ ನಿರ್ಧಾರಕ್ಕೆ ಬರುವ ನಿರೀಕ್ಷೆ ಇದೆ ಎಂದು ಹೇಳಲಾಗಿದೆ. ಅಮೆರಿಕದ ಪ್ರಸ್ತಾಪವನ್ನು ಇರಾನ್ ತಳ್ಳಿ ಹಾಕಿದೆ ಎಂದು ಇರಾನ್ ವಿದೇಶಾಂಗ ಸಚಿವಾಲಯ ಹೇಳಿದ್ದು ಅಮೆರಿಕ– ಇರಾನ್ ನಡುವೆ ಮಧ್ಯವರ್ತಿಯಾಗಿ ಕೆಲಸ ಮಾಡಿದ ಪಾಕಿಸ್ತಾನದೊಂದಿಗೆ ತಮ್ಮ ಅಭಿಪ್ರಾಯ ಹಂಚಿಕೊಳ್ಳುವುದಾಗಿ ಮಾಹಿತಿ ನೀಡಿದೆ.

ಪಾಕಿಸ್ತಾನದ ವಿದೇಶಾಂಗ ಸಚಿವರು ಪ್ರತಿಕ್ರಿಯಿಸಿ ಅಮೆರಿಕ– ಇರಾನ್ ನಡುವೆ ಯುದ್ಧ ಕೊನೆ ಗೊಳಿಸುವ ನಿಟ್ಟಿನಲ್ಲಿ ಹಾಗೂ ಶಾಶ್ವತ ಕದನ ವಿರಾಮ ಅಂತ್ಯಗೊಳಿಸುವ ನಿಟ್ಟಿನಲ್ಲಿ ಎಲ್ಲಾ ಪ್ರಯತ್ನಗಳು ನಡೆಯುತ್ತಿವೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು "ಕಳೆದ 24 ಗಂಟೆಗಳಲ್ಲಿ ಇರಾನ್ ಜೊತೆ ಅಮೆರಿಕ ಉತ್ತಮ ಮಾತುಕತೆ ನಡೆಸಿದೆ" ಎಂದು ಮಾಹಿತಿ ನೀಡಿದ್ದಾರೆ. ಇರಾನಿನ ಪರಮಾಣು ಪುಷ್ಟೀಕರಣದ ಮೇಲಿನ ಅಮಾನತು, ನಿರ್ಬಂಧಗಳನ್ನು ತೆಗೆದುಹಾಕುವುದು ಮತ್ತು ಹಾರ್ಮುಜ್ ಜಲಸಂಧಿಯ ಮೂಲಕ ಉಚಿತ ಸಾಗಣೆ ಪುನಃಸ್ಥಾಪಿಸುವುದು ಸೇರಿದಂತೆ ಹಲವು ವಿಷಯಗಳಿವೆ ಎನ್ನಲಾಗಿದೆ.

ಅಮೆರಿಕ ಮತ್ತು ಇರಾನ್ ನಡುವಿನ ಮಧ್ಯಸ್ಥಿಕೆಯ ಕುರಿತು ವಿವರಿಸಿದ ಎರಡು ಮೂಲಗಳು "ಅಮೆರಿಕನ್ ಪ್ರಸ್ತಾವನೆಯನ್ನು ಇನ್ನೂ ಇರಾನ್ ಪರಿಶೀಲಿಸುತ್ತಿದೆ. ಆ ನಂತರವೇ ಅಂತಿಮ ನಿರ್ಧಾರಕ್ಕೆ ಬರುವ ಸಾಧ್ಯತೆ ಇದೆ ಎಂದು ಹೇಳಿದೆ. ಇರಾನ್ ಸಂಸತ್ತಿನ ರಾಷ್ಟ್ರೀಯ ಭದ್ರತೆ ಮತ್ತು ವಿದೇಶಾಂಗ ನೀತಿ ಆಯೋಗದ ವಕ್ತಾರ ಇಬ್ರಾಹಿಂ ರೆಝಾಯಿ ಪ್ರತಿಕ್ರಿಯಿಸಿ "ಅಮೆರಿಕದ ಜೊತೆಗೆ ಮುಖಾ ಮುಖಿ ಮಾತುಕತೆ ನಡೆಸದೆ ಯಾವುದೇ ತೀರ್ಮಾನಕ್ಕೆ ಬರಲು ಸಾಧ್ಯವಾಗದು ಎಂದಿದ್ದಾರೆ.

## ಕುರ್ಚಿ ಕದನ ಹೈಕಮಾಂಡ್ ನಿರ್ಧಾರಕ್ಕೆ ಬದ್ಧ :ಸಿಎಂ ಸಿದ್ಧರಾಮಯ್ಯ



ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ರಾಜ್ಯದ ಕಾಂಗ್ರೆಸ್ ಸರ್ಕಾರ ಐದು ವರ್ಷಗಳನ್ನು ಪೂರ್ಣಗೊಳಿಸುತ್ತದೆ, ಕಾಂಗ್ರೆಸ್ ಹೈಕಮಾಂಡ್ ತೆಗೆದುಕೊಳ್ಳುವ ಯಾವುದೇ ನಿರ್ಧಾರಕ್ಕೂ ನಾನು ಬದ್ಧನಾಗಿದ್ದೇನೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪುನರುಚ್ಚರಿಸಿದ್ದಾರೆ.**

ಮೈಸೂರು ವಿಮಾನ ನಿಲ್ದಾಣದಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಸಿಎಂ, "ಮುಖ್ಯಮಂತ್ರಿ ಬದಲಾವಣೆ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಈ ಬಗ್ಗೆ ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಅವರು ತೆಗೆದುಕೊಳ್ಳುವ ನಿರ್ಧಾರವನ್ನು ನಾನು ಪಾಲಿಸುತ್ತೇನೆ. ಕರೆ ಬಂದರೆ ದೆಹಲಿಗೆ ಹೋಗುತ್ತೇನೆ. ರಾಹುಲ್ ಗಾಂಧಿ ಸಮಯ ನೀಡಿದರೆ ಭೇಟಿ ಮಾಡುತ್ತೇನೆ ಎಂದು ಹೇಳಿದರು. ರಾಜ್ಯ ಕಾಂಗ್ರೆಸ್ ಸರ್ಕಾರ ಐದು ವರ್ಷಗಳ ಅವಧಿಯನ್ನು ಪೂರ್ಣಗೊಳಿಸಲಿದೆ ಎಂದು ಪುನರುಚ್ಚರಿಸಿದ ಅವರು, ಹೈಕಮಾಂಡ್ ಬಯಸಿದರೆ ತಾವು ಮುಖ್ಯಮಂತ್ರಿಯಾಗಿ ಮುಂದುವರೆಯುವುದಾಗಿ ಹೇಳಿದರು.


ಇದೇ ವೇಳೆ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಉಪಚುನಾವಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವಿನ ಕುರಿತು ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ಈ ಎರಡೂ ಉಪಚುನಾವಣೆಗಳ ಜೊತೆಗೆ ಹಿಂದಿನ ಮೂರು ಉಪಚುನಾವಣೆಗಳ ಫಲಿತಾಂಶವೂ ಜನರು ನಮ್ಮ ಸರ್ಕಾರದ ಕಾರ್ಯಕ್ರಮಗಳನ್ನು ಮೆಚ್ಚಿದ್ದಾರೆ ಎಂಬುದನ್ನು ತೋರಿಸುತ್ತದೆ. ಜನರ ಆಶೀರ್ವಾದ ಮತ್ತು ಪ್ರೀತಿ ನಮ್ಮ ಸರ್ಕಾರದೊಂದಿಗಿದೆ" ಎಂದರು. ಬಳಿಕ ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಶೀಘ್ರದಲ್ಲೇ ನಡೆಯಲಿವೆ ಎಂದು ತಿಳಿಸಿದರು. ಪ್ರತಿಪಕ್ಷಗಳ ತಂತ್ರಗಳು ವಿಫಲವಾದವು ಎಂಬ ಪ್ರಶ್ನೆಗೆ ಉತ್ತರಿಸಿ, ಅವರಿಗೆ ಯಾವ ತಂತ್ರವೂ ಇರಲಿಲ್ಲ. ಅವರು ಕೇವಲ ಷಡ್ಯಂತ್ರಗಳಲ್ಲಿ ತೊಡಗಿದ್ದರು" ಎಂದು ಟೀಕಿಸಿದರು.

ಇದೇ ವೇಳೆ ಶೃಂಗೇರಿ ವಿಧಾನಸಭಾ ಕ್ಷೇತ್ರದ ಮರುಎಣಿಕೆ ವಿಚಾರದಲ್ಲಿಯೂ ಪ್ರತಿಕ್ರಿಯಿಸಿದ ಸಿಎಂ, ಹೈಕೋರ್ಟ್ ಆದೇಶದಂತೆ ತಿರಸ್ಕೃತ ಅಂಚೆ ಮತಪತ್ರಗಳ ಮರುಪರಿಶೀಲನೆ ವೇಳೆ ಕಾಂಗ್ರೆಸ್ ಅಭ್ಯರ್ಥಿ ಟಿ.ಡಿ. ರಾಜೇಗೌಡ ಪರ ಇದ್ದ 255 ಮತಪತ್ರಗಳನ್ನು ಅಮಾನ್ಯಗೊಳಿಸಲಾಗಿದೆ. "ಇದರ ಹಿಂದೆ ಷಡ್ಯಂತ್ರವಿದೆ. ನಾವು ನ್ಯಾಯಾಲಯದಲ್ಲಿ ಪ್ರಶ್ನಿಸುತ್ತೇವೆ" ಎಂದು ಹೇಳಿದರು. ರೈಲ್ವೆ ಉದ್ಯೋಗಿಗಳಿಗೆ ಬಡ್ತಿ ಪರೀಕ್ಷೆಯನ್ನು ಕನ್ನಡದಲ್ಲಿ ಬರೆಯಲು ಅವಕಾಶ ನೀಡದಿರುವ ಕುರಿತು ಮಾತನಾಡಿದ ಅವರು, ಇದು ಕನ್ನಡ ಭಾಷೆಯ ಬಗ್ಗೆ ಕೇಂದ್ರ ಸರ್ಕಾರದ ಮನೋಭಾವವನ್ನು ತೋರಿಸುತ್ತದೆ ಎಂದು ಕಿಡಿಕಾರಿದರು.

## ಅಜ್ಜನಂತೆ 'ಅಜಾತ ಶತ್ರು' ಆಗುವುದೇ ನನ್ನ ಗುರಿ: ರಾಜಕೀಯ ಮುಗಿದಿದೆ, ಇನ್ನೇನಿದ್ದರೂ ಅಭಿವೃದ್ಧಿ ಮಾತ್ರ; ಸಮರ್ಥ್ ಶಾಮನೂರು

ನೈಜ್ಯ ದೆಸೆ ನ್ಯೂಸ್





**ದಾವಣಗೆರೆ: ಚುನಾವಣೆ ಸಮಯದಲ್ಲಿ ಪಕ್ಷಪಕ್ಷಗಳ ನಡುವೆ ಸ್ಪರ್ಧೆ, ವಾಗ್ವಾದ, ತೀವ್ರ ಪೈಪೋಟಿ ಇರುವುದು ಸಹಜ, ಆದರೆ ಮತದಾನ ಮುಗಿದ ನಂತರ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಎಲ್ಲರೂ ಒಟ್ಟಾಗಿ ಕೆಲಸ ಮಾಡುವುದು ಮುಖ್ಯ ಎಂದು ನೂತನ ಶಾಸಕ ಸಮರ್ಥ್ ಶಾಮನೂರು ಹೇಳಿದ್ದಾರೆ.**

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜನರ ಹಿತವೇ ಮೊದಲ ಆದ್ಯತೆ, ಪಕ್ಷದ ರಾಜಕೀಯಕ್ಕಿಂತಲೂ ಜನರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು ಮುಖ್ಯ ಎಂಬ ಸಂದೇಶವನ್ನು ನೀಡಿದರು. ಮೊದಲಿಗೆ ದಾವಣಗೆರೆ ಜಿಲ್ಲೆಯ ಎಲ್ಲ ಮತದಾರರಿಗೆ ಅವರು ಹೃತ್ಪೂರ್ವಕ ಧನ್ಯವಾದ ತಿಳಿಸಿದ್ದಾರೆ. ತಮ್ಮ ಗೆಲುವು ವೈಯಕ್ತಿಕ ಸಾಧನೆ ಅಲ್ಲ, ಜನರ ವಿಶ್ವಾಸದ ಫಲ ಎಂದು ಹೇಳಿದ್ದಾರೆ.

ಅಲ್ಲದೇ ತಮ್ಮ ಪರವಾಗಿ ಪ್ರಚಾರ ನಡೆಸಿದ ಹಿರಿಯ ನಾಯಕರು, ಕಾರ್ಯಕರ್ತರು, ಬೆಂಬಲಿಗರಿಗೆ ವಿಶೇಷವಾಗಿ ಕೃತಜ್ಞತೆ ಸಲ್ಲಿಸಿದ್ದಾರೆ. ನಂತರ ತಮ್ಮ ಕೆಲಸದ ಬಗ್ಗೆ ಮಾತನಾಡಿ, ಕ್ಷೇತ್ರದ ಜನರಿಗೆ ಮತ್ತು ವಿಪಕ್ಷದವರಿಗೆ ಮಹತ್ವದ ಸಂದೇಶ ನೀಡಿದ್ದಾರೆ. ವಿರೋಧ ಪಕ್ಷದ ಜನಪ್ರತಿನಿಧಿಗಳು ಹಾಗೂ ಕಾರ್ಯಕರ್ತರಿಗೂ ಸಮರ್ಥ ಶಾಮನೂರು ಅವರು ವಿಶೇಷ ಮನವಿ ಮಾಡಿದ್ದಾರೆ. 'ಯಾವುದೇ ಅಭಿವೃದ್ಧಿ ಕೆಲಸ, ಜನರ ಸಮಸ್ಯೆ, ಬೇಡಿಕೆ ಇದ್ದರೂ ನಮಗೆ ತಿಳಿಸಿ. ನಮ್ಮ ಮನೆ ಬಾಗಿಲು, ಆಫೀಸ್ ಬಾಗಿಲು, ಮನದ ಬಾಗಿಲು ಯಾವಾಗಲೂ ತೆರೆದಿರುತ್ತದೆ' ಎಂದು ಅವರು ಭರವಸೆ ನೀಡಿದ್ದಾರೆ. ರಾಜಕೀಯ ಪಕ್ಷ ಬೇರೆ ಇರಬಹುದು, ಆದರೆ ಜನರ ಸೇವೆಯಲ್ಲಿ ಎಲ್ಲರೂ ಒಂದಾಗಬೇಕು ಎಂಬ ಮನೋಭಾವ ಅವರು ವ್ಯಕ್ತಪಡಿಸಿದ್ದಾರೆ. ಅಭಿವೃದ್ಧಿ ಕೆಲಸ ಮಾಡುವ ಸಾಮರ್ಥ್ಯ ಇದೆ ಎಂದೇ ಜನರು ನನ್ನ ಗೆಲ್ಲಿಸಿದ್ದಾರೆ. ನನ್ನ ಅಜ್ಜನ ರೀತಿ ಅಜಾತ ಶತ್ರು ಆಗುತ್ತೇನೆ. ಅದೇ ನನ್ನ ಗುರಿ ನಮ್ಮ ಮನೆ ಬಾಗಿಲು ಸದಾ

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.